ನೇಸರು

ತಿಂಗಳೋಲೆ

₹ 5/-

PAGES 20

MAY 2024 | Nesaru Tingalole | Vol. XLII - 05

The largest Democratic Elections on this Earth

ಮೈಸೂರು ಅಸೋಸಿಯೇಷನ್ ಮುಂಬೈ

THE MYSORE ASSOCIATION, BOMBAY

393, Bhau Daji Road, Matunga, Mumbai - 400 019. | Tel.: 2403 7065

Email : mysoreassociation.mumbai@gmail.com

ಮುಂಬರುವ ಕಾರ್ಯಕ್ರಮಗಳು



ಶುಕ್ರವಾರ ಮೇ 10, 2024ರ ಸಂಜೆ 5.30ಕ್ಕೆ

ಅಕ್ಷಯ ತೃತೀಯದಂದು

ಗಣಪತಿ ಪ್ರತಿಷ್ಠಾಪನಾ ದಿನ ನಿಮಿತ್ತ ಪೂಜೆ

ಮತ್ತು

ಭಜನೆ, ಪ್ರಸಾದ ವಿನಿಯೋಗ

ಏಪ್ರಿಲ್ 17, 2024ರಂದು ರಾಮನವಮಿಯಂದು ಅಸೋಸಿಯೇಶನ್‌ನಲ್ಲಿ ರಾಮೋತ್ಸವ

ಗೌ. ಸಂಪಾದಕರು
ಡಾ. ಜ್ಯೋತಿ ಸತೀಶ್
***

ಸಂಪಾದಕ ಮಂಡಳಿ:
ಡಾ. ಮಂಜುನಾಥ್
ಕೆ. ಮಂಜುನಾಥಯ್ಯ
ಕೆ. ಕಮಲ
ನಾರಾಯಣ ನವಿಲೇಕರ್
ಗಣಪತಿ ಶಂಕರಲಿಂಗ
***

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ.

– ಸಂ.

The views expressed by the contributors in this journal are theirs and not of the Association and the Association is not in anyway responsible for the same.

\- Ed.

****

ಸಂಪರ್ಕ ವಿಳಾಸ:
ನೇಸರು
ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ, ಮಾಟುಂಗ
ಮುಂಬಯಿ – 400 019.
☎ 24037065
Email:
mysoreassociation.mumbai@gmail.com
Website:
www.mysoreassociation.in

ನೇಸರು ತಿಂಗಳೋಲೆ

ಸಂಪುಟ - 42 ಮೇ- 2024 ಸಂಚಿಕೆ-5

ನಿಮ್ಮ ಮೇಲಿನ ಅಭಿಮಾನ ಹೆಚ್ಚಿಸಿಕೊಳ್ಳಿ

✍ ಡಾ. ಜ್ಯೋತಿ ಸತೀಶ್

ನಮಗೆ ಸಿಕ್ಕಿರುವಂತ ಈ ಜೀವನ ನಮ್ಮ ಬದುಕಿನಲ್ಲಿ ಒಂದೇ ಬಾರಿ ಸಿಗುವಂತದ್ದು. ಪುನರ್ಜನ್ಮ ಇದೆಯೋ ಇಲ್ಲವೋ ಅದು ಬೇರೇನೇ ವಿಷಯ. ಮನುಷ್ಯ ಜನ್ಮ ಪಡೆಯಲಿಕ್ಕೆ ನಾವು ಪುಣ್ಯ ಮಾಡಿದ್ದೇವೆ. ನಮಗೆ ಸಿಕ್ಕಿರುವಂಥ ಈ ಜೀವನವನ್ನು ಖುಷಿಯಾಗಿ, ಸಂತೋಷವಾಗಿ ಕಳೆಯಬೇಕು ಎಂಬುದು ನಮ್ಮೆಲ್ಲರ ಉದ್ದೇಶವಾಗಬೇಕು. ಅನಾವಶ್ಯಕ ವಿಷಯಗಳಲ್ಲಿ ತೂಗಾಡದೆ, ನಮ್ಮ ಜೀವನವನ್ನು ವ್ಯರ್ಥಮಾಡಿಕೊಳ್ಳಬಾರದು. ನಮ್ಮ ಜೀವನದ ಪ್ರತಿಯೊಂದು ಕ್ಷಣಗಳೂ ಅತ್ಯಂತ ಪ್ರಾಮುಖ್ಯವಾದುದುದು. ಕಳೆದು ಹೋದ ಸಮಯ ಮತ್ತೆ ತಿರುಗಿ ಬರಲಾರದು. ಮೊದಲು ನಮ್ಮನ್ನು ನಾವು ಪ್ರೀತಿಸಬೇಕು. ಮಿಕ್ಕಿದ್ದೆಲ್ಲ ಆಮೇಲೆ. ನಮ್ಮ ಬಗ್ಗೆ ನಮಗೇ ಪ್ರೀತಿ ಇಲ್ಲದ ಮೇಲೆ ನಾವು ಬೇರೆಯವರನ್ನು ಹೇಗೆ ಪ್ರೀತಿಯಿಂದ ನೋಡಿಕೊಳ್ಳಲು ಸಾಧ್ಯ? ನಿಮಗೆ ನೀವೇ ಪ್ರಮುಖ ಆದ್ಯತೆಯನ್ನು ಕೊಟ್ಟುಕೊಂಡಾಗ, ನಿಮ್ಮ ಜೀವನ ಸಂತೋಷದಿಂದ ಕೂಡಿರುತ್ತದೆ.

ನಿಮಗೆ ನಿಮ್ಮ ಮೇಲೆನೇ ಆತ್ಮವಿಶ್ವಾಸವಿಲ್ಲದಿದ್ದರೆ, ಜೀವನದಲ್ಲಿ ಮುಂದೆ ಹೋಗಲು ಸಾಧ್ಯವಿಲ್ಲ. ನೀವೇನು ಆಗಬೇಕು ಅಂದುಕೊಂಡಿದ್ದರೋ ಅದು ನಿಮ್ಮ ಆಸೆಯಾಗಿರಬೇಕು. ಅದು ಬಿಟ್ಟು ಬೇರೆಯವರ ಆಸೆಗೆ ತಕ್ಕಂತೆ ತಮ್ಮತನವನ್ನು ಬಲಿಕೊಡುವುದಲ್ಲ. ಆಗ ನೀವು ನಿಮಗೂ ನ್ಯಾಯ ಕೊಟ್ಟು ಕೊಳ್ಳಲಿಕ್ಕೆ ಆಗುವುದಿಲ್ಲ, ಬೇರೆಯವರ ಆಸೆಯಂತೆ ನಡೆದುಕೊಂಡು ಪೂರ್ಣಪ್ರಮಾಣದಲ್ಲಿ ಅವರಿಗೂ ನ್ಯಾಯ ಕೊಟ್ಟಂತೆ ಆಗುವುದಿಲ್ಲ. ಅಕ್ಕಪಕ್ಕದವರು ನಿಮ್ಮ ಬಗ್ಗೆ ಏನು ತಿಳಿದುಕೊಳ್ಳುತ್ತಾರೋ ಅಂತ ಹಿಂಜರಿಯುತ್ತಿದ್ದರೆ, ನೀವು ಈ ಜೀವನದ ಓಟದಲ್ಲಿ ಹಿಂದೆ ಉಳಿದುಕೊಂಡು ಬಿಡುತ್ತೀರಿ.

ನಾವು ಹುಟ್ಟುವಾಗಲೂ ಒಬ್ಬರೇ ಬಂದಿರೋದು, ಈ ಲೋಕ ಬಿಟ್ಟು ಹೋಗುವಾಗಲೂ ಒಬ್ಬರೇ ಹೋಗೋದು. ಎಲ್ಲವನ್ನೂ ಒಬ್ಬಂಟಿಯಾಗಿ ಎದುರಿಸೋದನ್ನು ಕಲಿಯಬೇಕು. ಯಾರ ಮೇಲೂ ಹೆಚ್ಚು ಅವಲಂಬಿತರಾಗಿರಬಾರದು. ನಮಗೇ ನಾವೇ ಸ್ಫೂರ್ತಿಯಾಗಬೇಕು, ಆದರ್ಶವಾಗಬೇಕು. ನಮ್ಮೊಳಗಿರುವ ದುರ್ಬಲತೆಯನ್ನು ಕಂಡುಕೊಂಡು, ಅದನ್ನು ಮೆಟ್ಟಿ ನಿಲ್ಲಬೇಕು. ಆ ಮೂಲಕ ಹೊಸತೊಂದು ಆವಿಷ್ಕಾರಕ್ಕೆ ನಮ್ಮನ್ನು ತಯಾರಾಗುವಂತೆ ಶ್ರಮಿಸಬೇಕು. ಈ ಸಂದರ್ಭದಲ್ಲಿ ನನಗೆ ಜಾರ್ಜ್ ಬರ್ನಾಡ್ ಶಾ ಅವರ ಸಾಲುಗಳು ನೆನಪಾಗುತ್ತದೆ. "Life isn't about finding yourself. Life is about creating yourself.".

ಜೀವನದಲ್ಲಿ ಚಿಕ್ಕ ಚಿಕ್ಕ ವಿಷಯಗಳಿಗೆ ಖುಷಿಪಡೋದನ್ನು ಕಲಿಯಬೇಕು. ಆಗ ನಮ್ಮ ಸಕಾರತ್ಮಕ ಮನಸ್ಸು ಎಲ್ಲದರಲ್ಲೂ ಸಕರಾತ್ಮಕತೆಯನ್ನು ಹುಡುಕಲು ಪ್ರಯತ್ನಿಸುತ್ತದೆ. ಇಲ್ಲದಿದ್ದರೆ, ನಮ್ಮ ಮನಸ್ಸಿನೊಳಗೆ ನಕರಾತ್ಮಕತೆ ತಾಂಡವ ಆಡಿದರೆ, ಎಲ್ಲದರಲ್ಲೂ ತಪ್ಪು ಎದ್ದುಕಾಣುವುದರ ಜೊತೆಗೆ ಜೀವನದಲ್ಲಿ ಜಿಗುಪ್ಸೆ, ವೈರಾಗ್ಯ ಬೆಳೆದು ಬಿಡುತ್ತದೆ. ಸ್ವಯಂ ಪ್ರಯತ್ನವಿಲ್ಲದಿದ್ದರೇ ಆ ದೇವರು ಕೂಡ ಏನೂ ಸಹಾಯಮಾಡುವುದಿಲ್ಲ ಅಂತೆ. ಒಮ್ಮೆ ನಿಮ್ಮೊಳಗೆ ಬದಲಾವಣೆ ಆಗಲು ಶುರುವಾದಾಗ, ತನ್ನಿಂದ ತಾನೆ ನಿಮ್ಮ ಸುತ್ತಮುತ್ತಲಿನ ವಾತಾವರಣವೂ ಬದಲಾವಣೆ ಆಗಲು ಆರಂಭವಾಗುತ್ತದೆ. ಸಾಧ್ಯವಾದಷ್ಟು ನಮ್ಮ ಮೇಲೆ ನಾವು ಅಭಿಮಾನವನ್ನು ಬೆಳೆಸಿಕೊಳ್ಳೋಣ. ಹೊಸ ಹೊಸ ಚಿಂತನೆಗಳನ್ನು ಅಳವಡಿಸಿಕೊಳ್ಳುತ್ತಾ, ಕ್ರಿಯಾಶೀಲರಾಗೋಣ, ಹಾಗೆಯೇ ಆಶಾವಾದಿಯಾಗಿರೋಣ.

ಪ್ರವಾಸದ ಅನುಭವ ಕಥನ

✍ ಡಾ| ಸುಮಾ ದ್ವಾರಕಾನಾಥ್

ನನ್ನ ಮಗಳ ನಾದಿನಿ ಮದುವೆ ಭೀಮನ ಕೋಣೆ ಎಂಬಲ್ಲಿ ಏರ್ಪಾಡಾಗಿತ್ತು. ಅದು ಸಾಗರದ ಹತ್ತಿರ ಇದ್ದುದರಿಂದ, ನಾನೂ ಮತ್ತು ನಮ್ಮವರು, ನನ್ನ ತಮ್ಮ ಇರುವ ಊರು ಜೋಗ್ ಗೆ ಪ್ರವಾಸದ ಯೋಜನೆ ಹಾಕಿಕೊಂಡೆವು. ಮುಂಬೈ ನಿಂದ ರೈಲಿನಲ್ಲಿ ಹೊರಟು, ಗೋವಾದ ಮೂಲಕ ಹೊನ್ನಾವರ ತಲುಪಿದೆವು. ಅಲ್ಲಿಗೆ ನನ್ನ ತಮ್ಮ ಕಾರು ಕಳಿಸಿದ್ದ. ನನ್ನ ಅಧ್ಯಯನದ ಒಂದು ಭಾಗವೇ ಆಗಿದ್ದ (ಮುಂಬೈ ಕನ್ನಡ ನಾಟಕಗಳು) ಕರ್ಕಿ ಸೂರಿ ಶಾಸ್ತ್ರಿಗಳನ್ನು ನೆನಪಿಸಿಕೊಳ್ಳುತ್ತಾ ದಾರಿ ಸಾಗಿತ್ತು. ಸುಮಾರು ಎರಡು ಗಂಟೆ ಪಯಣಿಸಿದ ಬಳಿಕ ಜೋಗ್ ತಲುಪಿದೆವು. ಅಂದು ವಿಶ್ರಾಂತಿ ಪಡೆದು ಮಾರನೆ ದಿನ ಮದುವೆಗೆ ಹೊರೆಟೆವು. ಆ ಊರು ಹೆಗ್ಗೋಡಿನ ಸಮೀಪ ಇದ್ದುದರಿಂದ ಅಳಿಯನ ಅಜ್ಜಿಯ ಮನೆಗೆ ಹೋಗಿ, ನಂತರ ಹೆಗ್ಗೋಡಿನ ಸುಬ್ಬಣ್ಣನವರ ಕಲಾ ಮಂದಿರವನ್ನೂ ನೋಡಿ ಬಂದೆವು. ಆಗಲೇ ನನಗೆ ಅಲ್ಲಿ ನಡೆಯುವ ಸಾಂಸ್ಕೃತಿಕ ಶಿಬಿರಕ್ಕೆ ಹೋಗಲೇ ಬೇಕೆಂದು ಇಚ್ಛೆಯಾದದ್ದು.

ಮದುವೆಯ ಒಂದು ವಿಶೇಷವೆಂದರೆ ಅಲ್ಲಿಯ ಊರ ಹೆಂಗಸರೇ ಮದುವೆ ಮನೆಯ ಅಡುಗೆ ಶಾಲೆಯನ್ನು ನಿರ್ವಹಿಸಿದ ಬಗೆ, ಪಟ್ಟಣದವಳಾದ ನನಗೆ ಆಶ್ಚರ್ಯ ಉಂಟು ಮಾಡಿತ್ತು. ಯಾವ ಮುಜುಗರವೂ ಇಲ್ಲದೆ, ತರಕಾರಿ ಹೆಚ್ಚುವುದರಿಂದ ಹಿಡಿದು, ಎಲ್ಲಾ ಪಂಕ್ತಿಗಳಿಗೂ ನಗುನಗುತಾ ಬಡಿಸಿದ ಆ ಹೆಂಗಸರ ಉತ್ಸಾಹ ನಿಜವಾಗಲೂ ಮೆಚ್ಚುವಂತಹುದು. ಸಾಮುದಾಯಿಕ ಜೀವನದ ಅರ್ಥ ಇದೇ ಎನ್ನಿಸಿತು. ಮದುಮಗಳೇ, ಮದುವೆಯ ಮಂಟಪದ ಅಲಂಕಾರವನ್ನು ಸ್ವತಃ ಮಾಡಿದ್ದಳು. ಮನೆಯಲ್ಲಿರುವ ಸಲಕರಣೆಗಳಲ್ಲೇ, ಸೀರೆಗಳನ್ನೆಲ್ಲಾ ಬಳಸಿ ಸುಂದರ ಬಣ್ಣಬಣ್ಣದ ಲೋಕ ಸೃಷ್ಟಿಸಿದ್ದಳು. ಈಗಿನ event management ಖರ್ಚು ನೋಡ್ತಿದ್ರೆ ಹಣ ಎಂಥ ಬದಲಾವಣೆ ತಂದಿದೆ ಎನಿಸದಿರಲಾರದು.

ಮದುವೆ ಮುಗಿಸಿ ಸಾಗರದ ಸುತ್ತಮುತ್ತ ಇರುವ ಪ್ರವಾಸಿ ಸ್ಥಳಗಳನ್ನು ಸಂದರ್ಶಿಸಲು ಮೊದಲು ಮಾಡಿಕೊಂಡೆವು. ಅಂಥ ಒಂದು ಹೆಸರುವಾಸಿಯಾದ ಜಾಗ ಸಿಗಂದೂರು ದೇವಿ. ಸಾಗರದಿಂದ ಅದಕ್ಕೆ ತಲುಪುವ ದಾರಿಯೇ ಒಂದು ವಿಶೇಷ. ಶರಾವತಿ ಹಿನ್ನೀರು ದಾಟಲು ಒಂದು ದೊಡ್ಡ ಲಾಂಚ್ ಹತ್ತಬೇಕು. ಆ ಲಾಂಚಿನಲ್ಲಿಯೇ ಬಸ್ಸು, ಲಾರಿ, ಸಾಮಾನು ಪ್ರಯಾಣಿಕರ ಸಾಗಾಣಿಕೆಯಾಗಬೇಕು. ಕಣ್ಣಿಗೆ ಕಾಣುವ ಎದುರುಗಡೆ ದಡವನ್ನು ತಲುಪಲು ಒಂದು ರೂಪಾಯಿಯ ಟಿಕೆಟ್. ನಿಜವಾಗಲೂ ಅದೊಂದು ವಿಶಿಷ್ಟ ಅನುಭವವಾಗಿತ್ತು. ಆ ಕಡೆ ದಡ ತಲುಪಿದ ಮೇಲೆ ಮತ್ತೆ ಸುಮಾರು ಒಂದು ಮೈಲಿ ದೂರವಿರುವ ಭವ್ಯವಾದ ದೇವಿಯ ದೇವಾಲಯ ತಲುಪಲು ಆಟೋರಿಕ್ಷಗಳ ಸಹಾಯ ಬೇಕಾಗಿತ್ತು. ದೇವಿ ದರ್ಶನ ಮಾಡಿಕೊಂಡು, ಲಾಂಚ್ ಪಕ್ಕದಲ್ಲೇ ಇದ್ದ ಅಳಿಯನ ಚಿಕ್ಕಪ್ಪನ ಹೋಟೆಲಿನಲ್ಲಿ ಊಟಮುಗಿಸಿ ಮನೆಗೆ ವಾಪಸ್ಸು ಬಂದೆವು.

ಅಳಿಯನ ನೆಂಟರ ಒತ್ತಾಯದ ಮೇರೆಗೆ, ಅಲ್ಲೇ ಹತ್ತಿರದಲ್ಲೇ ೨೦ ಕಿ.ಮೀ. ದೂರದಲ್ಲಿರುವ ಮಹಾದೇವನ ದರ್ಶನಕ್ಕೆ ಹೋಗಬೇಕಾಯಿತು. ಕಾಡಿನ ಕಥೆ ಪ್ರಕಾರ ಯಾವುದೋ ಒಂದು ಜಾತಿಯ ಗಿಡದ ಎಲೆಗಳ ಸ್ಪರ್ಶವಾದರೆ, ಪ್ರಯಾಣಿಕರು ಸುತ್ತಿದ ಜಾಗದಲ್ಲೇ, ಅದರ ಪ್ರಭಾವವಿರುವ ತನಕ ಅಲ್ಲೇ ಸುತ್ತುತ್ತಾ ಇರುವರಂತೆ ಎನ್ನುವ ವಿಷಯ ಕೇಳಿದ ಮೇಲೆ ನಮಗೂ ಹಾಗೇ ಆಗಿದೆ ಎನಿಸತೊಡಗಿತ್ತು. ಆದರೆ ಭಟ್ಕಳದ ರಸ್ತೆಯಲ್ಲಿ ಇರುವ ಬೆಟ್ಟ ತಲುಪಲು ನಮಗೆ ಸುಮಾರು ಎರಡು ಗಂಟೆ ಬೇಕಾಯಿತು. ಅಲ್ಲೋ ನನ್ನ ನಾದಿನಿಗೆ ಬೆಟ್ಟ ಹತ್ತಲೂ ಕಷ್ಟವಾಯಿತು. ಬಂಡೆಗಳನ್ನು ದಾಟಿ ಮೇಲೆ ಹೋದರೆ, ಒಂದು ಪಾಳುಬಿದ್ದ ಶಿವನ ದೇವಾಲಯದ ಪಕ್ಕದಲ್ಲಿ, ಬಂಡೆಯಮೇಲಿಂದ ಸಣ್ಣಗೆ ನೀರು ಒಂದೊಂದೇ ತೊಟ್ಟು ತೊಟ್ಟಿಕ್ಕುತ್ತಿತ್ತು. ಅದರ ಮಹಿಮೆ ಏನೆಂದರೆ ಭಕ್ತಾದಿಗಳಿಲ್ಲದ ದಿನ ಸಣ್ಣರೂಪದಲ್ಲಿ ನೀರು ತೊಟ್ಟಿಕ್ಕುವುದಂತೆ. ಜಾತ್ರೆ, ಪೂಜಾದಿನಗಳಲ್ಲಿ ಮಾತ್ರ ಜನಸಂದಣಿಗೆ ತಕ್ಕಂತೆ ನೀರು ಭೋರ್ಗರೆದು ಹೆಚ್ಚು ಹೆಚ್ಚಾಗಿ ಬೀಳುವುದಂತೆ. ಪ್ರಕೃತಿಯ ನೀರಿನ ನಿರ್ವಹಣೆ ನೋಡಿ ನಾವು ದಂಗಾದೆವು.

ಜೋಗ್ ಜಲಪಾತ ಹಲವು ಸಲ ನೋಡಿದ್ದರಿಂದ, ಸುತ್ತಮುತ್ತ ಇರುವ ಗೋಕರ್ಣ, ಇಡಗುಂಜಿ ಗಣಪತಿ, ಮುರ್ಡೇಶ್ವರದ ಸಮುದ್ರ ತೀರ ಸುತ್ತಾಡಿ ಬಂದೆವು. ನಮ್ಮ ಮಾವನವರ ಊರೆಂದು ಹೊನ್ನಾಳಿಯ ರಾಯರ ಮಠಕ್ಕೂ ಹೋಗಿದ್ದೆವು. ಮಠದ ಪಕ್ಕದಲ್ಲೇ ಹರಿಯುವ ನದಿ ಪ್ರಶಾಂತವಾದ ವಾತಾವರಣವೆಂದು ಸಂಭ್ರಮಿಸಿ, ತೀರ್ಥಪ್ರಸಾದವೆಂದು ಭಯಭಕ್ತಿಯಿಂದ ಊಟಕ್ಕೆ ಕೂತರೆ, ಅಡುಗೆಶಾಲೆಯಲ್ಲಿಯೇ ನಿರ್ಭಯವಾಗಿ ದೊಡ್ಡ ದೊಡ್ಡ ಹೆಗ್ಗಣಗಳಂತಿರುವ ಇಲಿಗಳು ನಮ್ಮ ಸುತ್ತ ಓಡಾಡುವುದನ್ನು ನೋಡಿ ಮನಸ್ಸಿಗೆ ತುಂಬಾ ಘಾತವಾಯಿತು. ಇಂಥ ದೈವಿಕ ವಾತಾವರಣದಲ್ಲಿ ಆರೋಗ್ಯದ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲದಿರುವುದು ಬಹಳ ಬೇಸರ ತಂದಿತು.

ಮುಂದೆ ನಮ್ಮ ಪ್ರಯಾಣ ಇತಿಹಾಸ ಪ್ರಸಿದ್ಧವಾದ ಕೆಳದಿ, ಇಕ್ಕೇರಿ ಸಂದರ್ಶನ. ನನಗೆ ತೀರ್ಥಕ್ಷೇತ್ರಗಳ ವರ್ಣನೆಗಿಂತ, ನಮ್ಮ ರಾಜರುಗಳು ಯುದ್ಧಗಳಿಗಷ್ಟೇ ಪ್ರಾಮುಖ್ಯತೆ ಕೊಡದೆ ಪ್ರಜೆಗಳ ಅಭಿವೃದ್ಧಿಗೂ ಶ್ರಮಿಸಿರುವುದನ್ನು ನೆನಪಿಸಿಕೊಳ್ಳಲು ಮನಸ್ಸಿಗೆ ಮುದ ಕೊಡುತ್ತದೆ.

ಶಿವಮೊಗ್ಗ ಜಿಲ್ಲೆಯ, ಸಾಗರ ತಾಲೂಕಿನಲ್ಲಿ ಕೆಳದಿ ಇದೆ. ಕೆಳದಿ ಸಂಸ್ಥಾನ ಕಿರಿದಾದ ತನ್ನವ್ಯಾಪ್ತಿಯಲ್ಲೂ ಸಾಧಿಸಿದ ತನ್ನ ಹಿರಿಮೆ ಹಿರಿದಾದುದು. ೧೫ನೆಯ ಶತಮಾನದ ಆರಂಭದಿಂದ ಹದಿನೆಂಟನೆಯ ಶತಮಾನದ ಉತ್ತರಾರ್ಧದವರೆಗೂ ಸಮೃದ್ಧಿಯ ತಾಣವಾಗಿ ಮೆರೆದಿದ್ದು ಕೆಳದಿ ಸಂಸ್ಥಾನ.

ಕೆಳದಿ ನಾಯಕರು, ಬಿದನೂರ ನಾಯಕರು, ಇಕ್ಕೇರಿ ರಾಜರು (೧೪೯೯-೧೭೬೩) ಕರ್ನಾಟಕ ರಾಜ್ಯದ ಪ್ರದೇಶಗಳನ್ನು ಆಳಿದ್ದ ರಾಜವಂಶಗಳು. ಸದಾಶಿವ ನಾಯಕನನ್ನು ´He was one of the less known able rulers of India´ ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಇಂದಿಗೂ ಶಿವಪ್ಪ ನಾಯಕನ ಶಿಸ್ತು ಗಾದೆಯ ಮಾತಾಗಿ ಉಳಿದಿದೆ. ಶಿವಪ್ಪ ನಾಯಕನ ಕಾಲದಲ್ಲಿ ನಡೆದ ಭೂಸುಧಾರಣೆ, ಒಂದು ಹೊಸ ಮಾರ್ಪಾಡನ್ನೇ ತಂದಿತು. ಕಂದಾಯದ ವಸೂಲಿಯಲ್ಲಿ ಆತನು ಹಾಕಿಕೊಟ್ಟ ಮಾರ್ಗ, ಇಂದಿಗೂ ಆರ್ಥಿಕ ತಜ್ಞರ ಮೆಚ್ಚುಗೆಯನ್ನು ಪಡೆದಿದೆ.

ಇಂದಿನ ಪರಿಸರಕ್ಕೆ ಮುಖ್ಯವಾಗಿ ಬೇಕಾದ ಧಾರ್ಮಿಕ ಸಹಿಷ್ಣುತೆ, ಅಂದಿನ ಅವರ ಸಮಾನ ದೃಷ್ಟಿಯಲ್ಲಿ ನಿಚ್ಚಳವಾಗಿ ಕಾಣಬಹುದು. ವೆಂಕಟಪ್ಪ ನಾಯಕ ಶೃಂಗೇರಿಯಲ್ಲಿ ಒಂದು ಮಠವನ್ನು ಕಟ್ಟಿಸಿ, ಅಲ್ಲಿನ ಗುರುಗಳಾದ ಅಭಿನವ ನೃಸಿಂಹಭಾರತಿಗಳಿಗೆ ಅದನ್ನು ಒಪ್ಪಿಸಿ 'ಶೃಂಗೇರಿಯ ಪುನರ್ನಿರ್ಮಾಪಕ' ಎಂಬ ಬಿರುದು ಪಡೆದಿದ್ದಾನೆ. ಶೃಂಗೇರಿಯ ಶಾರದಾ ಪೀಠ ಮತ್ತು ಉಡುಪಿಯ ದ್ವೈತ ಮತಗಳಿಗೆ ಅವರು ನೀಡಿದ ಪ್ರೋತ್ಸಾಹ ಮತ್ತು ದಾನದತ್ತಿಗಳು ಸ್ತುತ್ಯರ್ಹ. ಚೆನ್ನಮಾಜಿ ಮಂಗಳೂರಿನಲ್ಲಿ ಕ್ರೈಸ್ತದೇವಾಲಯಕ್ಕಾಗಿ ಒಂದು ನಿವೇಶನ ನೀಡಿದರೆ, ವೆಂಕಟಪ್ಪ ಮೂಡಬಿದರೆಯ ಜೈನ ಬಸದಿಗೆ ದತ್ತಿ ನೀಡಿದ್ದಾನೆ. ಭುವನ ದುರ್ಗದ ಬಳಿ ಮಸೀದಿ ನಿರ್ಮಿಸಿ ಅದಕ್ಕೆ ದತ್ತಿ ನೀಡಿದವರೂ ಕೆಳದಿ ಅರಸರೇ. ಇಂದಿನ ರಾಜಕಾರಣಿಗಳು ತಮ್ಮ ಬೇಳೆ ಬೇಯಿಸಿಕೊಳ್ಳಲು ಜಾತಿ ವಿಭಜನೆ ಮಾಡುವುದನ್ನು ನೋಡಿದರೆ, ನಾವು ನಮ್ಮ ಇತಿಹಾಸದಿಂದ ಸಾಕಷ್ಟು ಕಲಿಯುವುದಿದೆ ಎನಿಸುತ್ತದೆ.

ಜೊತೆಗೆ ವ್ಯಾಪಾರ ವ್ಯವಹಾರದಲ್ಲಂತೂ ಇವರದು ಎತ್ತಿದ ಕೈ. ಆಗಲೇ ಅಲ್ಲಿಂದ ವಿದೇಶಗಳಿಗೆ ಸಂಬಾರ ಪದಾರ್ಥ, ಅಕ್ಕಿ, ಅಡಕೆ, ತೆಂಗು ಮೊದಲಾದ ವಸ್ತುಗಳ ರಫ್ತು ಭರದಿಂದ ಸಾಗುತ್ತಿತ್ತು.

ಹೀಗೆ ದೀರ್ಘಕಾಲ ರಾಜ್ಯಭಾರ ಮಾಡಿದ ಚಿಕ್ಕ ಸಂಸ್ಥಾನ ಕೊನೆಯಲ್ಲಿ ಮೈಸೂರಿನ ಒಂದು ಭಾಗವಾಗಿ ಪರಿಣಮಿಸಿದ್ದನ್ನು ನಾವು ಕಾಣುತ್ತೇವೆ.

ಕೆಳದಿಯ ಇಷ್ಟು ಇತಿಹಾಸವನ್ನು ತಲೆಯಲ್ಲಿ ನೆನಪಿಸಿಕೊಳ್ಳುತ್ತಾ, ಒಂದು ಕಾಲದಲ್ಲಿ ಆ ಭಾಗದಲ್ಲಿ ಆಳಿ ಮೆರೆದ ಸಂಸ್ಥಾನದ ಪಳೆಯುಳಿಕೆಗಳನ್ನು ಸಂದರ್ಶಿಸಿ ಬಂದೆವು. ಭವ್ಯವಾದ ದೇವಸ್ಥಾನಗಳ ನಿರ್ಮಾಣದ ಮೂಲಕ ತಮ್ಮ ಆಳ್ವಿಕೆಯ ವೈಭವವನ್ನು ಇಂದಿಗೂ ಸಾರುತ್ತಿರುವ ಭಾರತೀಯ ಸಂಸ್ಕೃತಿಗೆ ನಾವು ತಲೆಬಾಗಲೇ ಬೇಕು.

ದಾರಿಯಲ್ಲಿ ವಾಪಸ್ಸು ಬರುವಾಗ ಶ್ರೀಧರ ಸ್ವಾಮಿಗಳ ವರದಾಶ್ರಮ ನೋಡಿ ಬಂದೆವು. ಅಂದು ರಾತ್ರಿ ಬೆಂಗಳೂರಿನ ಕಲಾ ಗಂಗೋತ್ರಿಯವರ 'ಮೈಸೂರು ಮಲ್ಲಿಗೆ 'ನಾಟಕದ ಪ್ರದರ್ಶನ ಜೋಗ್ ನಲ್ಲಿತ್ತು. ಅದನ್ನು ನೋಡಿ ಬೆಂಗಳೂರಿಗೆ ವಾಪಸ್ಸಾದೆವು.

MATRIMONIAL

Alliance Invited for a Smarta, Kannada Brahmin boy, DOB: 27th May 1992, Gotra: Kashyapa, Rashi: Meena, Nakshatra: Uttarabhadra, Qualification: B.E. Production VJTI- Mumbai working at Easyserve Marketing, Operation Head in Mumbai.

Contact: Mrs. Sriprabha Sathyanarayana

Contact No.: 9870494853

ಹಿಂದಿನ ಸಂಚಿಕೆಯಿಂದ.....

ಕಸೂತಿಯಮ್ಮ

(ಉಮಾ ರಾವ್ ಕಥೆಗಳು)

✍ **ಉಮಾ ರಾವ್**

ಗಂಡನ ಮನೆ ಕಾಲಿಟ್ಟಾಗ ಎದುರಾದ ದೃಶ್ಯ ಅವಳನ್ನು ಅಲ್ಲಾಡಿಸಿತು. ರಸ್ತೆಯಂಚಿನಲ್ಲಿ ನಿಂತಿದ್ದ ಮನೆಯ ಕಾಂಪೌಂಡನ್ನೂ ಕಾಂಕ್ರೀಟು ಮಾಡಿದ್ದರು. ವರಾಂಡದಲ್ಲಿ ಎರಡು ಹಳೇ ಬೆತ್ತದ ಕುರ್ಚಿಗಳು ನಿಂತಿದ್ದವು ನಡುಮನೆಯಲ್ಲಿ ಬಾಗಿಲ ಮೇಲೆ ಒಟ್ಟು ಮಧ್ಯವಯಸ್ಸಿನ ಲಕ್ಷಣವಾದ ಹೆಂಗಸಿನ ಚಿತ್ರ ಮೂಲೆಯಲ್ಲಿ ತಿಂಗಳುಗಳ ಹಿಂದೆ ತೀರಿಕೊಂಡ ಮಾವನ ಕೋಲು, ಆರಾಮ ಕುರ್ಚಿ, ಅಡಿಗೆ ಮನೆಯಲ್ಲಿ ಕೆಮ್ಮುತ್ತಾ ನಾರು ಕುದಿಸುತ್ತಿದ್ದ ಮುದುಕ ಪಕ್ಕದಲ್ಲಿದ್ದ ತಮ್ಮದಾಗಬೇಕಿದ್ದ ರೂಮಿನಲ್ಲಿ ಹೊಸದಾ ಕಂಡಿದ್ದ ಜೋಡಿ ಮಂಚ. ಅದರ ಮೇಲೆ ಇನ್ನೂ ಮಿಲ್ಲಿನ ವಾಸನೆ ಹೊಡೆಯುತ್ತಿದ್ದ ಹಾಸಿಗೆಗಳು. ಮೂಲೆಯಲ್ಲಿ ಎಲ್ಲಾ ಕೆಲಸವನ್ನೂ ಸದ್ದಿಲ್ಲದೆ ನಿಭಾಯಿಸುತ್ತಿದ್ದ ರಂಗ ನಿಂತಿದ್ದ. ಆ ಮನೆ ಸುತ್ತ ಮರ ಗಿಡಗಳಿರಲಿಲ್ಲ. ಎಲ್ಲೂ ಒಂದು ಹೂಬಳ್ಳಿ ಇರಲಿಲ್ಲ. ಹೂಕುಂಡದ ಕಲೆಯೂ ಇರಲಿಲ್ಲ. ಬಾಗಿಲಿಗೆ ತೋರಣವಿರಲಿಲ್ಲ. ಎಲ್ಲೆಲ್ಲೂ ವಿಚಿತ್ರ ಮೌನ. ಜೋಲುತ್ತಿದ್ದ ಜೇಡರ ಬಲೆ.

ದಿನಾ ಬೆಳಗಾಗೆದ್ದು ಕೋರ್ಟಿಗೆ ಹೋಗಿ ಸಂಜೆಯೂ ಕಕ್ಷಿಗಾರರ ಪಾಲಾಗುತ್ತಿದ್ದ ಗಂಡ ಅವಳಿಗೆ ಸಿಗುತ್ತಿದ್ದುದ್ದು ಪ್ರತಿ ರಾತ್ರಿ ಹೆಚ್ಚು ಮಾತಿಲ್ಲದ, ಉತ್ಕಟ ದೈಹಿಕ ಸನಿಹದ ಕೆಲವು ನೋವಿನ ಕ್ಷಣಗಳು ಮಾತ್ರ. ಮನೆ ಓರಣ ಮಾಡಬೇಕೆಂದು ಅವಳಿಗೆ ಅನ್ನಿಸಿರಲಿಲ್ಲ. ಹಣಕ್ಕೆ ಕೊರತೆ ಇಲ್ಲದಿದ್ದರೂ, ಏನೂ ಕೊಳ್ಳುವ ಉತ್ಸಾಹವಿರಲಿಲ್ಲ..

ಇದ್ದಕ್ಕಿದ್ದಂತೆ ಒಂದು ದಿನ ತಾನು ಬಸುರಿ ಎಂದು ತಿಳಿದಾಗ ಅವಳಿಗೆ ಸಂತಸ ಭಯ ಎರಡೂ ಆಗಿತ್ತು. ಒಂಬತ್ತು ತಿಂಗಳ ನಂತರ ಲೇಬರ್ ವಾರ್ಡಿನಲ್ಲಿ ಅವಳು ನೋವು ತಿನ್ನುತ್ತಿದ್ದಾಗ, ದೂರದಲ್ಲಿ ಬೃಹತ್ ಕಂಬಗಳ ತಣ್ಣನೆಯ ಕೋರ್ಟ್ ರೂಮಿನಲ್ಲಿ ಗಂಡ ತಂದೆಯನ್ನು ಕೊಂದ ಒಬ್ಬ ಮಗನನ್ನು ಶಿಕ್ಷೆಯಿಂದ ಬಚಾಯಿಸಲು ವಾದ ಮಾಡುತ್ತಿದ್ದ. ಸಂಜೆ ಅವನು ಆಸತ್ರೆಗೆ ಬರುವ ಹೊತ್ತಿಗೆ ಮಗು ಬದುಕುಳಿದಿರಲಿಲ್ಲ. ಅವಳ ಕಣ್ಣಿನಿಂದ ಹೊರಟ ಹನಿ ಅಲ್ಲಾಡದೆ ಮಲಗಿದ್ದ ತೋಯಿಸಿದಂತೆಯೇ, ಯಾವುದೋ ಕೈಗಳು ಅದನ್ನು ಬಿಳಿ ಬಟ್ಟೆಯಿಂದ ಮುಚ್ಚಿದ್ದವು. ಮುಂದೆ ಬದುಕಿನಲ್ಲಿ ಅವಳೆಂದೂ ಅಳಲಿಲ್ಲ.

ಆಸ್ಪತ್ರೆಯಿಂದ ಮನೆಗೆ ಬಂದ ಮಾರನೆಯ ದಿನವೇ ಅವಳು ಮಾರ್ಕೆಟ್ಟಿಗೆ ಹೋಗಿ ರಾಶಿ ರಾಶಿ ಬಟ್ಟೆ ತಂದಳು. ಬಣ್ಣಬಣ್ಣದ ದಾರ ತಂದಳು. ದಿನವೆಲ್ಲಾ ಕೂತು ಅವುಗಳನ್ನು ಓರಣ ಮಾಡಿದ್ದಳು. ಅಂದಿನಿಂದ ತಾನೇ ಡಿಜೈನುಗಳನ್ನು ಬರೆದು ಕಸೂತಿ ಹಾಕತೊಡಗಿದಳು. ಹಸಿರೆಲೆಗಳ ನಡುವೆ ಕೆಂಪು ಹೂಗಳು. ಅರಳಿದ ತೋರಣಗಳು, ದಿಂಬಿನ ಚೀಲದ ತುಂಬಾ ಗುಲಾಬಿಗಳು. ಬೆಡ್‌ಶೀಟಿನ ಮೇಲೆ ಮನೆ ಹರಡಿದ ಪುಟಾಣಿ ಹಳದಿ ಹೂಗಳು. ಟೇಬಲ್ ಕ್ಲಾತ್ ಅಂಚಿಗೆ ಜಿನಿಯಾ, ಡೇಲಿಯಾ, ಫ್ಲಾಕ್ಸ್. ಎಂದೂ ಉಪಯೋಗಿಸದ ಕರವಸ್ತ್ರಗಳ ಮೂಲೆಗೆ ಹೂಗೊಂಚಲುಗಳು. ಪೆಟ್ಟಿಕೋಟಿನ ಮೇಲೆ ರಂಗೋಲಿ ಡಿಜೈನುಗಳು. ರವಿಕೆಯ ತೋಳಿಗೆ ನೀಲಿ ಪಾದರಿಗಳು. ಗಂಟೆಗಟ್ಟಳೆ ವರಾಂಡದಲ್ಲಿ ಬೆತ್ತದ ಕುರ್ಚಿಯ ಮೇಲೆ ಕೂತು ತಲೆತಗ್ಗಿಸಿ ಕಸೂತಿಯಲ್ಲಿ ಮೈಮರೆಯುತ್ತಿದ್ದ ಅವಳ ಮಡಿಲು ಈಗ ಎಂದೂ ಖಾಲಿಯಿರುತ್ತಿರಲಿಲ್ಲ. ರಸ್ತೆಯವರಿಗೆಲ್ಲಾ ಅವಳೊಂದು ವಿಚಿತ್ರ ರೀತಿಯ ಸವಾಲಾದಳು.

ಆದರೆ ದಿನಾ ಬೆಳಗ್ಗೆ ೧೦ ಗಂಟೆಯ ಹೊತ್ತಿಗೆ ಕೊಂಚ ಸಮಯ ಅವಳ ಕಣ್ಣು ಗಳು ಹುಡುಕಾಡುತ್ತಿದ್ದುವು. ರಸ್ತೆಯುದ್ದಕ್ಕೂ, ಯಾರದೋ ನಿರೀಕ್ಷೆಯಲ್ಲಿರುವಂತೆ. ಒಂದರ್ಧ ಗಂಟೆ. ನಂತರ ಮತ್ತೆ ಅವಳು ತನ್ನ ಸರಪಳಿ ಹೊಲಿಗೆಯತ್ತ ಗಮನ ಹರಿಸುತ್ತಿದ್ದಳು. ತನ್ನ ಭಯದ, ನಿರೀಕ್ಷೆಯ, ಅಶಾಂತಿಯ, ದುಗುಡದ ಕ್ಷಣಗಳನ್ನು ಒಂದೊಂದಾಗಿ ಹೊಲಿಗೆಯಲ್ಲಿ ಪೋಣಿಸುತ್ತಿದ್ದಂತೆ ಅವಳ ಬದುಕು ಉರುಳುತ್ತಿತ್ತು. ದೇಹ ಮನಸ್ಸು ಮಾಗಿತ್ತು.

ಗಂಡ ತೀರಿಕೊಂಡಾಗ ಅವಳಿಗೆ ಆಘಾತವೇನೂ ಆಗಲಿಲ್ಲ. ಇದ್ದಾಗಲೇ ಅವಳಲ್ಲಿ ಉಳಿಯದಿದ್ದ ಗಂಡ ಹೋಗಿ ಯಾವ ರೀತಿಯ ನೋವೂ ಉಳಿಸಲಿಲ್ಲ. ಅವಳೂ ಕುಂಕುಮ ಅಳಿಸಲಿಲ್ಲ. ಬಳೆ ತೆಗೆಯಲಿಲ್ಲ. ಬದಲಾಗಲಿಲ್ಲ. ಮನೆಯ ಗಾರೆ ಉದುರಿತು. ಜೇಡರಬಲೆ ಹೆಚ್ಚಾಯಿತು. ರಂಗ ಮುದುಕನಾದ. ಕುರ್ಚಿಯ ಬೆತ್ತ ಸಡಿಲಾಯಿತು.

ಬೆರಳುಗಳು ದುರ್ಬಲವಾದುವು. ಬೆನ್ನು ಬಗ್ಗಿತು. ಆದರೆ ಕಣ್ಣುಗಳು ದಿನಾ ಬೆಳಗ್ಗೆ ನಗರದ ಹುಡುಕಾಟವನ್ನು ಕಂಡು ಮನೆ ತುಂಬಾ ಕಸೂತಿಬಟ್ಟೆಗಳು ಪಾಬೆಳಗೆ ಕಣ್ಣನ್ನು ಏನು ಮಾಡಬೇಕೆಂದು ತಿಳಿಯದೆ ರಂಗನ ಹೆಂಡತಿ, ಮಕ್ಕಳ ಸೇರಿಸಿತು. ಅಟ್ಟನ್ನು ಕೊಡುತ್ತಿದ್ದಳು. ಕೇರಿಯ ತರಕಾರಿ ಮಾರುವವರಿಗೆ, ಕಸ ಗುಡಿಸು ಕರೆದು ಬೇಡುವ ಮಕ್ಕಳಿಗೆ ಕೊಟ್ಟುಬಿಡುತ್ತಿದ್ದಳು. ಕೇರಿಯವರೆಲ್ಲಾ "ಹುಚ್ಚಿ, ದಿನವೆಲ್ಲಾ ವರಿಗೆ ಕಸೂತಿ ಹಾಕೋದು. ಬೆನ್ನು ಮುರಿದುಕೊಳ್ಳೋದು. ಬೀದಿಯವರಿಗೆಲ್ಲಾ ದಾನ ಮಾಡೋದು, ಹುಚ್ಚಮ್ಮ ಕಂಕಸೂತಿಯಮ್ಮ ಎಂದು ಅಕ್ಕರೆಯಿಂದ ಬೈದುಕೊಳ್ಳುತ್ತಿದ್ದರು. ಅವಳಿಗೆ ಕಸೂತಿಯಮ್ಮನೆಂದೇ ಹೆಸರಾಯಿತು.

ಇತ್ತೀಚೆಗೆ ಅವಳು ಕಸೂತಿ ಹಾಕಿದ ಹೂಗಳು ವಿಚಿತ್ರವಾಗಿ ಕಾಣಿಸುತ್ತಿದ್ದವು. - ಏಕೆಂದರೆ ಅವಳು ಒಂದೇ ಬಣ್ಣದ ದಾರ ಉಪಯೋಗಿಸಲು ಪ್ರಾರಂಭಿಸಿದಳು. ನೀಲಿಬಣ್ಣದ ಗುಲಾಬಿ, ಸುಗಂಧರಾಜ, ಬೋಗನ್‌ವಿಲ್ಲಾ, ಕಣಿಗಲೆ, ಹೂಗೊಂಚಲುಗಳು. * ಹಸಿರುಬಣ್ಣದ ಸೇವಂತಿಗೆ ಸಾಲುಗಳು. ಹಳದಿ ಬಣ್ಣದ ಎಲೆ ತೋರಣಗಳು, ಕೆಂಪುಬಣ್ಣದ ಮಲ್ಲಿಗೆ ಮಾಲೆಗಳು. ಜೊತೆಗೆ ಅವಳ ಹೊಲಿಗೆಯೂ ಮೊದಲಿನಂತೆ ಸರಿ ಇಲ್ಲದೆ, ಸೊಟ್ಟು ಸೊಟ್ಟಾಗಿ ಇರುತ್ತಿದ್ದವು. ಮಧ್ಯೆ ಮಧ್ಯೆ ದಾರಗಳು ಹಾಗೇ ಉಳಿದಿರುತ್ತಿದ್ದುವು. ಅಂಗಡಿಗೆ ಹೋಗಿ ಹೊಸಬಟ್ಟೆ ತರುವ ಬೇಸರದಿಂದ ಹಳೆಯ ಬಟ್ಟೆಯಿಂದ ಹಳೆಯ ಡಿಜೈನ್ ಬಿಚ್ಚಿ ಅದರ ಮೇಲೆ ಇನ್ನೇನಾದರೂ ಹೊಸ ಡಿಜೈನ್ ಹಾಕುವಳು. ಅಂದು ಬೆಳಗ್ಗೆ ಅವಳಿಗೇ ಏನೋ ಯಾವ ಡಿಜೈನೂ ಸರಿಬರದೆ ಕಸಿವಿಸಿ ಆರಂಭವಾಗಿತ್ತು. ಬಿಚ್ಚಿ ಹಾಕಿದಳು. ಬೇರೆ ಹೊಲಿಗೆ ಪ್ರಯತ್ನಿಸಿದಳು. ಕತ್ತು ನೋಯಲಾರಂಭಿಸಿತು ಹಾಗೇ ತಲೆ ಎತ್ತಿ ನೋಡಿದಾಗ ಅವಳ ಕಣ್ಣುಗಳು ಎಂದಿನಂತೆ ನಿರೀಕ್ಷೆಯಿಂದ ರಸ್ತೆ ↑ ಯುದ್ದಕ್ಕೂ ಹರಿದಾಡಿದುವು. ಆ ಕ್ಷಣ ಅವಳಿಗೆ ತನ್ನ ಮಡಿಲಲ್ಲಿದ್ದ ಕಸೂತಿ ಮರೆತು ನ: ಹೋಗಿತ್ತು. ಆಗ ಅವಳು ರಸ್ತೆ ತಿರುವಿನಲ್ಲಿ ಕಂಡ ವ್ಯಕ್ತಿಯಿಂದ ಬೆಚ್ಚಿದಳು. ಅವನೇ. ಅದೇ ಬೂದುಬಣ್ಣದ ಪ್ಯಾಂಟು, ಬಿಳೀ ಗರಿಮುರಿ ಶರಟು. ಕಪ್ಪು ಶೂಗಳು. ಕೈಯಲ್ಲಿ ಪುಸ್ತಕ. ತಲೆಗೂದಲಲ್ಲಿ ಅಷ್ಟಿಷ್ಟು ಬೆಳ್ಳಿ ಮೂಡಿತ್ತು. ಕಣ್ಣಿಗೆ ಕನ್ನಡಕ ಬಂದಿತ್ತು. ಎಲ್ಲಾ ಮರೆತು ಥಟ್ಟನೆ ಚಿಕ್ಕ ಹುಡುಗಿಯಂತೆ ಮೆಟ್ಟಿಲಿಂದ ಹಾರಿ ಗೇಟಿನ ಹತ್ತಿರ ಓಡಿದಳು. ಅವನ ನೇರ ದೃಷ್ಟಿ ಇತ್ತ ಹರಿಯದಾದಾಗ ಗೇಟಿನ ಶಬ್ದ ಮಾಡಿದಳು. ಕೆಮ್ಮಿದಳು. ಆಗ ಅವನ ನೋಟ ಇವಳತ್ತ ಹರಿಯಿತು. ಇವಳ ಕಣ್ಣುಗಳು ಹೊಳೆದವು. ತುಟಿಯಂಚಿ ನಲ್ಲಿ ಕಿರುನಗೆ ಮೂಡಿತು. ಅವನು ಗಲಿಬಿಲಿಗೊಂಡ. ಅವನ ಕಣ್ಣುಗಳು ಇವಳನ್ನು ಗುರುತಿಸಿ ಅಗಲ ಆಗಲಿಲ್ಲ. ಇವಳ ನಗು ನೋಡಿ ಒಂದೆರಡು ಕ್ಷಣ ಅನುಮಾನಿಸಿ, * ಮೆಲ್ಲಗೆ ಮೆಲುನಗೆ ಬೀರಿದ. ಆದರೆ ಅದು ನೂರಾರು ಕತೆಗಳನ್ನು ಹೇಳುವ ಆತ್ಮೀಯ ಪರಿಚಿತ ನಗೆಯಾಗಿರಲಿಲ್ಲ. ಯಾರೋ ಅಪರಿಚಿತರಿಗೆ ಸೌಜನ್ಯದಿಂದ ಬೀರುವ ಮರುಕದ ನಗೆಯಾಯಿತು.

ಅವನು ಕೈಯ್ಯಲ್ಲಿದ್ದ ಪುಸ್ತಕ ಒಂದು ಕೈಯಿಂದ ಇನ್ನೊಂದಕ್ಕೆ ಬದಲಿ ನಡೆದುಹೋದ. ಅವಳು ಅಲ್ಲಿ ಎಷ್ಟು ಹೊತ್ತು ನಿಂತಿದ್ದಳೋ ತಿಳಿಯದು.

ಅಂದು ಸಂಜೆಯಾದರೂ ಕಸೂತಿಯ ಮೇಲೆ ಬಾಗಿ ಕೂತ ಅವಳನ್ನು ನೋಣ ಅಕ್ಕಪಕ್ಕದವರು ಯೋಚನೆಗೀಡಾದರು. ಕತ್ತಲಾಗುತ್ತಿತ್ತು. ಎಂದೂ ಇಷ್ಟು ಹೊತ್ತ ಕೂತವಳಲ್ಲ. ಅವಳ ಕೈ ಅಲ್ಲಾಡದಿದ್ದನ್ನು ಗಮನಿಸಿ, ಅನುಮಾನದಿಂದ ಗೇಟೆ ತೆರೆದು ಹತ್ತಿರ ಹೋದರು. ಅವಳು ಅಸುನೀಗಿ ಎಷ್ಟೋ ಹೊತ್ತಾಗಿತ್ತು. ಬೆರಳುಗಳ ಮೇಲೆ ವಾಲಿದ ತಲೆಯ ಭಾರಕ್ಕೆ ಸೂಜಿ ಕೈಗೆ ಚುಚ್ಚಿಕೊಂಡಿತ್ತು. ಅದರಿಂದ ಬಂದ ಹನಿರಕ್ತ ಬಿಳಿ ಬೆಡ್‌ಶೀಟಿನ ಹಕ್ಕಿ ಬದಿ ಮೆತ್ತಿಕೊಂಡಿತ್ತು.

ಅಂದು ಅವಳು ಊರಿನಲ್ಲೆಲ್ಲಾ ಸುದ್ದಿಯಾದಳು. ಕತೆಯಾದಳು. ಯಾರೂ ವಾರಸು ದಾರರಿಲ್ಲವೆಂಬುದನ್ನರಿತು ಪೊಲೀಸರು ಬಂದರು. ಮಹಿಳಾ ಸಂಸ್ಥೆಗಳವರು ಬಂದು ರಾಶಿ ರಾಶಿ ಬಿದ್ದಿದ್ದ ಸುಂದರ ಕಸೂತಿಯ ಬಟ್ಟೆಗಳನ್ನು ಕಂಡು ಕೊಂಡಾಡಿದರು. ದೇಶವಿದೇಶಗಳಲ್ಲಿ ಅದರ ಪ್ರದರ್ಶನವಿಡಬೇಕೆಂದರು. ಹೊತ್ತು ವ್ಯಾನಿನಲ್ಲಿ ಸಾಗಿಸಿದರು. ಎಂಥಾ ಒಂಟಿತನದ ಮಧ್ಯೆಯೂ ಕಲೆಯ ಮೂಲಕ ತನ್ನ ಚೇತನವನ್ನು ಜೀವಂತ ವಾಗಿಟ್ಟುಕೊಂಡ ಅದ್ಭುತ ವ್ಯಕ್ತಿಯೆಂದು ಹೊಗಳಿದರು. ಸಂಜೆಗೆ ಪೊಲೀಸರೂ ತನಿಖೆ ಮಾಡಿ, ಎಲ್ಲರನ್ನೂ ಹೊರಗೆ ಕರೆದು ದೀಪವಾರಿಸಿ ಬಾಗಿಲಿಗೆ ಬೀಗ ಹಾಕಿದರು.

ಆದರೆ, ಅವಳು ದಿಂಬಿನಡಿ ಮಡಿಸಿಟ್ಟ ಹೂವಿನ ಕಸೂತಿ ಮಾಡಿದ್ದ ಪುಟಾಣಿ ಕಾಲುಚೀಲದ ಜೊತೆ ಮಾತ್ರ ಯಾರ ಕಣ್ಣಿಗೂ ಬಿದ್ದಿರಲಿಲ್ಲ. ವರ್ಷಗಳಾದರೂ ಅದರ ಬಣ್ಣವೂ ಮಾಸಿರಲಿಲ್ಲ.

•

ಮುಂಬೈ ವಿಶ್ವವಿದ್ಯಾಲಯದ ಕನ್ನಡ ವಿಭಾಗ: ಆರು ಕೃತಿಗಳ ಬಿಡುಗಡೆ ಕಾರ್ಯಕ್ರಮ.

ಜೀವನವನ್ನು ಸಮೀಪದಿಂದ ನೋಡಿದರೆ ಮಾತ್ರ ಉತ್ತಮ ಕೃತಿ ರಚನೆ ಸಾಧ್ಯ: ಪ್ರವೀಣ್ ಭೋಜ ಶೆಟ್ಟಿ.

ಮುಂಬಯಿ ವಿಶ್ವವಿದ್ಯಾಲಯದ ಕಾರ್ಯಕ್ರಮ ಎಂದರೆ ಅದು ಅತ್ಯಂತ ಸರಳ, ಸುಂದರ. ಬುದ್ಧಿಜೀವಿಗಳು, ಅಕ್ಷರಜ್ಞಾನಿಗಳು ಸೇರಿರುವ ಈ ಕಾರ್ಯಕ್ರಮಕ್ಕೆ ಬಂದಿರುವುದು ನನಗೆ ಅನ್ಯಗೃಹದಿಂದ ಬಂದಂತಾಗಿದೆ. ಇದೊಂದು ವಿಶೇಷ ಸಭೆ. ಮುಂಬೈ ವಿವಿ ಕನ್ನಡ ವಿಭಾಗದ ಮಹನೀಯರು ಕೃತಿರಚನೆಗಳನ್ನು ಮಾಡುತ್ತಾ ಬಂದಿದ್ದಾರೆ. ಜೀವನವನ್ನು ಹತ್ತಿರದಿಂದ ನೋಡಿದರೆ ಮಾತ್ರ ಒಳ್ಳೆಯ ಪುಸ್ತಕ ಬರೆಯಬಹುದು ಎಂದು ಮುಂಬಯಿ ಬಂಟರ ಸಂಘದ ಅಧ್ಯಕ್ಷ ಪ್ರವೀಣ್ ಭೋಜ ಶೆಟ್ಟಿ ಅವರು ಅಭಿಪ್ರಾಯ ಪಟ್ಟರು. ಅವರು ಏಪ್ರಿಲ್ 13 ರ ಶನಿವಾರದಂದು, ಕಲೀನಾ ಕ್ಯಾಂಪಸ್ ನ ಜೆ ಪಿ ನಾಯಕ್ ಭವನದಲ್ಲಿ ಮುಂಬೈ ವಿವಿ ಕನ್ನಡ ವಿಭಾಗ ಆಯೋಜಿಸಿದ್ದ ವಿಭಾಗದ 46ರ ಸಂಭ್ರಮ, ನಿರಂಜನ ಶತಮಾನೋತ್ಸವ, ಉಪನ್ಯಾಸ ಹಾಗೂ ಆರು ಕೃತಿಗಳ ಬಿಡುಗಡೆ ಕಾರ್ಯಕ್ರಮಗಳನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ವಿಭಾಗ ಪ್ರಮುಖರು ಮತ್ತು ಪ್ರಾಧ್ಯಾಪಕರೂ ಆದ ಪ್ರೊ. ಜಿ ಎನ್ ಉಪಾಧ್ಯ ಅವರು ಮಾತನಾಡಿ, 'ಕನ್ನಡವು ಕನ್ನಡವ ಕನ್ನಡಿಸುತಿರಲಿ ' ಎಂಬ ಕವಿವಾಣಿಯ ಆಶಯದಂತೆ ಕನ್ನಡ ವಿಭಾಗವು ನಲ್ವತ್ತಾರು ವರ್ಷಗಳಿಂದ ಅಹರ್ನಿಶಿ ಕೆಲಸ ಮಾಡುತ್ತಿದೆ. ಇತರ ವಿವಿಗಳ ಕನ್ನಡ ವಿಭಾಗಗಳಿಗೆ ಹೋಲಿಸಿದರೆ ಮುಂಬೈ ವಿವಿ ಕನ್ನಡ ವಿಭಾಗ ಅತಿ ಹೆಚ್ಚು ಕೃತಿಗಳನ್ನು ಪ್ರಕಟಿಸಿದೆ. ನಮ್ಮ ವಿಭಾಗದ ಕೃತಿಗಳ ಸಂಖ್ಯೆ ನೂರನ್ನು ದಾಟಿದೆ. ಪ್ರತಿಭಾವಂತರಾದ ನಮ್ಮ ವಿದ್ಯಾರ್ಥಿಗಳ ಕೃತಿಗಳು ನೂರ್ಕಾಲ ಉಳಿಯುತ್ತವೆ ಎಂಬ ಭರವಸೆ ಇದೆ. ಅತಿಹೆಚ್ಚು ದತ್ತಿ ಉಪನ್ಯಾಸಗಳನ್ನು ಏರ್ಪಡಿಸುವ ಕನ್ನಡ ವಿಭಾಗ ಜ್ಞಾನವನ್ನು ಹೆಚ್ಚಿಸುವ ಕೆಲಸವನ್ನು ಮಾಡುತ್ತಿದೆ ಎಂದರು. ಮುಂಬೈಯನ್ನು ಸಾಂಸ್ಕೃತಿಕ ನಗರಿಯಾಗಿ ಗುರುತಿಸುವಲ್ಲಿ ತುಳು ಕನ್ನಡಿಗರ ಪಾತ್ರ ದೊಡ್ಡದು. ಇಲ್ಲಿಯ ಸಂಘ ಸಂಸ್ಥೆಗಳು ದೊಡ್ಡ ಶಕ್ತಿ ಕೇಂದ್ರಗಳು. ವಿಶ್ವವಿದ್ಯಾಲಯದ ಕನ್ನಡ ವಿಭಾಗ ಸಮಸ್ತ ಕನ್ನಡಿಗರ ಮುಖವಾಣಿಯಾಗಿ ಕೆಲಸ ಮಾಡುತ್ತಾ ಇದೆ ಎಂದು ಅವರು ನುಡಿದರು.

ಅತಿಥಿಗಳಾಗಿ ಆಗಮಿಸಿದ್ದ ಕರ್ನಾಟಕ ಮಲ್ಲ ಪತ್ರಿಕೆಯ ಸಂಪಾದಕ ಚಂದ್ರಶೇಖರ ಪಾಲೆತ್ತಾಡಿ ಮತ್ತು ಮುಂಬೈ ಬಂಟರ ಸಂಘದ ಅಧ್ಯಕ್ಷ ಪ್ರವೀಣ್ ಭೋಜ ಶೆಟ್ಟಿ ಅವರು ವಿಭಾಗದ ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರು ಆದ ಡಾ. ಜಿ ಎನ್ ಉಪಾಧ್ಯ ಅವರ 'ಸಾಹಿತ್ಯ ಸಿದ್ಧಿ ಸಿರಿ ಸೇವೆಯ ಸಾಕಾರ- ಡಾ. ಸುಧಾಮೂರ್ತಿ ', 'ರಸಋಷಿ ರಾಷ್ಟ್ರಕವಿ ಕುವೆಂಪು '; ಕನ್ನಡ ವಿಭಾಗದ ಸ್ನಾತಕೋತ್ತರ ವಿದ್ಯಾರ್ಥಿ ವಿದ್ಯಾ ರಾಮಕೃಷ್ಣ ಅವರ ಅನುವಾದಿತ ಕೃತಿ ' ಫ್ರಮ್ ವರ್ಡ್ಸ್ ಟು ನೋಬಲ್ ಡೀಡ್ಸ್- ದ ಇನ್ಸೈರಿಂಗ್ ಟೇಲ್ ಆಫ್ ಡಾ. ಸುಧಾ ಮೂರ್ತಿ ' ಮತ್ತು ಸಂಶೋಧನ ವಿದ್ಯಾರ್ಥಿ ಕಲಾ ಭಾಗ್ವತ್ ಅವರ ' ಜಾಲಂದರ' ಕೃತಿಗಳನ್ನು; ಪ್ರವೀಣ್ ಭೋಜ ಶೆಟ್ಟಿ ಅವರು ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಪೂರ್ಣಿಮಾ ಶೆಟ್ಟಿ ವಿರಚಿತ ' ನನ್ನ ಇತ್ತೀಚೆಗಿನ ಓದು ' ಕೃತಿಯನ್ನು ಮತ್ತು ಡಾ. ಜಿ ಎನ್ ಉಪಾಧ್ಯ ಅವರು ಕನ್ನಡ ವಿಭಾಗದ ಸ್ನಾತಕೋತ್ತರ ವಿದ್ಯಾರ್ಥಿ ಸವಿತಾ ಅರುಣ್ ಶೆಟ್ಟಿ ಅವರ ' ಬೆಳಕಿಂಡಿ-ಮಿತ್ರಾ ವೆಂಕಟ್ರಾಜ್ ಅವರ ಸಾಹಿತ್ಯ ಅವಲೋಕನ' ಕೃತಿಗಳನ್ನು ಲೋಕಾರ್ಪಣೆಗೈದರು.

'ನನ್ನ ಇತ್ತೀಚೆಗಿನ ಓದು ' ಕೃತಿಯ ಕರ್ತೃ ಡಾ. ಪೂರ್ಣಿಮಾ ಶೆಟ್ಟಿ ಅವರು ಮಾತನಾಡಿ, ನನ್ನ ಓದಿನ ಹವ್ಯಾಸವೇ 'ನನ್ನ ಇತ್ತೀಚೆಗಿನ ಓದು ' ಕೃತಿರಚನೆಗೆ ಕಾರಣ. ಹೆಚ್ಚಿನ ಓದಿಗೆ ಪ್ರೇರಣೆ, ಪ್ರೇರೇಪಣೆ ನೀಡಿದ್ದು ಮುಂಬೈ ವಿವಿ ಕನ್ನಡ ವಿಭಾಗ. ಕೃತಿಗಳನ್ನು ಓದಲು ಕಳುಹಿಸಿಕೊಟ್ಟ ಕೃತಿಕಾರರು ಕೂಡ ಓದಿಗೆ, ಬರವಣಿಗೆಗೆ ಕಾರಣಕರ್ತರಾಗಿದ್ದಾರೆ ಎಂದರು. ಅವರು ವಿಭಾಗದ ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರು ಆದ ಡಾ. ಜಿ ಎನ್ ಉಪಾಧ್ಯ ಅವರ ಪ್ರೋತ್ಸಾಹ, ಬಂಧುಗಳು ಮತ್ತು ಸ್ನೇಹಿತರ ಹಾರೈಕೆಗಳಿಗೆ ಅಭಿವಾದಿಸಿದರು.

'ಜಾಲಂದರ' ಕೃತಿಯ ಲೇಖಕಿ ಕಲಾ ಭಾಗ್ವತ್ ಅವರು ಮಾತನಾಡುತ್ತಾ, ಕನ್ನಡ ವಿಭಾಗವು ಸಮಸ್ತ ಮುಂಬೈ ಕನ್ನಡಿಗರಿಗೆ ನಮ್ಮದು ಎಂಬಂತಹ ನಿಸ್ವಾರ್ಥವಾದ ಭಾವನೆಯನ್ನು ತರುವಂಥದ್ದು. ಅದಕ್ಕೆ ಕಾರಣ, ವಿಭಾಗದ ಆರೋಗ್ಯಪೂರ್ಣವಾದ ವಾತಾವರಣ. ಓದು- ಬರವಣಿಗೆಯಲ್ಲಿ ನನಗಿರುವ ಆಸಕ್ತಿ, ಎಲ್ಲರ ಆಶೀರ್ವಾದ, ಹಾರೈಕೆ ಇದ್ದುದರಿಂದ ನಾಲ್ಕು ಕೃತಿಗಳನ್ನು ಬರೆದು ಪ್ರಕಟಿಸಲು ಸಾಧ್ಯವಾಯಿತು ಎಂದರು. ತನ್ನ ಕೃತಿರಚನೆಗೆ ಕಾರಣರಾದ ಎಲ್ಲರಿಗೂ ಕೃತಜ್ಞತೆಗಳನ್ನು ಅರ್ಪಿಸಿದರು.

'ಬೆಳಕಿಂಡಿ' ಕೃತಿಯ ಕೃತಿಕಾರರಾದ ಸವಿತಾ ಅರುಣ್ ಶೆಟ್ಟಿ ಅವರು ತಮ್ಮ ಚೊಚ್ಚಲ ಕೃತಿರಚನೆಯ ಅನುಭವವನ್ನು ಹಂಚಿಕೊಳ್ಳುತ್ತಾ, ವಿಶ್ವವಿದ್ಯಾಲಯದ ವಿದ್ಯಾರ್ಥಿಯಾಗಿ ಸೇರಿಕೊಂಡ ಮೇಲೆ ತಾನು ಕಲಿತದ್ದು ಅಪಾರ. ಓದು ಬರೆಹ ತನ್ನ ಆಸಕ್ತಿ ಆಗಿದ್ದರೂ ವಿಶ್ವವಿದ್ಯಾಲಯ ಕಲಿಸಿದ ಬರೆವಣಿಗೆಯ ಶಿಸ್ತು ಹೆಚ್ಚಿನದು. ಅದಕ್ಕೆ ಕಾರಣ ವಿಭಾಗದ ಪ್ರಾಧ್ಯಾಪಕರ ಅಧ್ಯಾಪನ, ಮಾರ್ಗದರ್ಶನ ಮತ್ತು ಪ್ರೋತ್ಸಾಹ ಎಂದು ನುಡಿದು ಮಿತ್ರಾ ವೆಂಕಟ್ರಾಜ್ ಅವರ ಸಹಕಾರವನ್ನು ಸ್ಮರಿಸಿದರು.

ಡಾ. ಜಿ. ಎನ್ ಉಪಾಧ್ಯ ಅವರ ' ಸಾಹಿತ್ಯ ಸಿದ್ಧಿ ಸಿರಿ ಸೇವೆಯ ಸಾಕಾರ -ಡಾ. ಸುಧಾ ಮೂರ್ತಿ ' ಕೃತಿಯ ಅನುವಾದಕರಾದ ವಿದ್ಯಾ ರಾಮಕೃಷ್ಣ ಅವರು ತಮ್ಮ ಮಾತಿನಲ್ಲಿ, ಗುರುಗಳ ಕೃತಿಯನ್ನು ಅನುವಾದ ಮಾಡುವ ಕೆಲಸವು ಬಯಸದೇ ಬಂದ ಭಾಗ್ಯವಾಗಿದೆ. ಕಾನ್ವೆಂಟ್ ಶಾಲೆಯಲ್ಲಿ ಕಲಿತುದುದರಿಂದ ಅಲ್ಲಿಯ ಗುರುಗಳ ಅಧ್ಯಾಪನದಿಂದಾಗಿ ಆಂಗ್ಲಭಾಷೆಯ ತಳಪಾಯ ಗಟ್ಟಿಯಾಗಿತ್ತು ಎಂದರು. ಕೃತಿ ಪ್ರಕಟಣೆಯಲ್ಲಿ ನೆರವಾದ ಎಲ್ಲರಿಗೂ ವಂದನೆಗಳನ್ನು ಸಲ್ಲಿಸಿದರು.

ಡಾ. ಜಿ ಎನ್ ಉಪಾಧ್ಯ ಅವರ ' ರಸಋಷಿ ರಾಷ್ಟ್ರಕವಿ ಕುವೆಂಪು ' ಕೃತಿಯನ್ನು ಪರಿಚಯಿಸಿದ ವಿಭಾಗದ ಸಂಶೋಧನ ವಿದ್ಯಾರ್ಥಿ ನಳಿನಾ ಪ್ರಸಾದ್ ಅವರು ಕೃತಿಯ ವಿಶೇಷತೆಯ ಕಡೆಗೆ ಗಮನಸೆಳೆಯುತ್ತಾ, ಈ ಕೃತಿಯ ಓದು ಹೊಸ ಓದುಗನಿಗೆ ಕುವೆಂಪು ಸಾಹಿತ್ಯಕ್ಕೆ ಪ್ರವೇಶಿಕೆಯನ್ನು ಒದಗಿಸಿಕೊಟ್ಟರೆ, ವಿದ್ಯಾರ್ಥಿಗಳಿಗೆ ಅಲ್ಪಸ್ವಲ್ಪ ಓದನ್ನು ಸ್ಪಷ್ಟವಾಗಿಸಿಕೊಳ್ಳಲು, ಮತ್ತೊಮ್ಮೆ ಓದಲು ಅನುಕೂಲ ಮಾಡಿಕೊಡುತ್ತದೆ. ಕುವೆಂಪು ಸಾಹಿತ್ಯವನ್ನು ಚೆನ್ನಾಗಿ ಓದಿಕೊಂಡಿರುವ ವಿದ್ವಾಂಸರಿಗೆ ಕುವೆಂಪು ಅವರ ಸಾಹಿತ್ಯವನ್ನು ಮೆಲುಕು ಹಾಕುವಂತೆ ಮಾಡುತ್ತದೆ ಎಂದರು.

ಸವಿತಾ ಅರುಣ್ ಶೆಟ್ಟಿ ಅವರ 'ಬೆಳಕಿಂಡಿ' ಕೃತಿಯನ್ನು ವಿಭಾಗದ ಸಂದರ್ಶಕ ಪ್ರಾಧ್ಯಾಪಕರಾದ ಡಾ. ಉಮಾ ರಾಮರಾವ್ ಅವರು ಪರಿಚಯಿಸಿದರು. ಸಾಕಷ್ಟು ವಿಪುಲವಾಗಿರುವ ಮಿತ್ರಾ ವೆಂಕಟ್ರಾಜ್ ಅವರ ಸಾಹಿತ್ಯವನ್ನು ಚಿಕ್ಕ ಪುಸ್ತಕದಲ್ಲಿ ತುಂಬಾ ಸಶಕ್ತವಾಗಿ, ಅಚ್ಚುಕಟ್ಟಾಗಿ, ಅರ್ಥವತ್ತಾಗಿ, ಸಮರ್ಪಕವಾಗಿ ಸವಿತಾ ಅವರು ಪರಿಚಯಿಸಿದ್ದಾರೆ. ಕೃತಿಯ ಹೆಸರು ಅನ್ವರ್ಥಕವಾಗಿದೆ ಎಂದು ಅವರು ನುಡಿದರು.

ಡಾ. ಜಿ ಎನ್ ಉಪಾಧ್ಯ ಅವರ ಇನ್ನೊಂದು ಕೃತಿ, 'ಸಾಹಿತ್ಯ ಸಿದ್ಧಿ ಸಿರಿ ಸೇವೆಯ ಸಾಕಾರ- ಡಾ. ಸುಧಾ ಮೂರ್ತಿ' ಹೊತ್ತಗೆಯನ್ನು ವಿಭಾಗದ ಕನ್ನಡ ಕಲಿಕಾ ತರಗತಿ ಶಿಕ್ಷಕರಾದ ಗೀತಾ ಮಂಜುನಾಥ್ ಅವರು ಪರಿಚಯಿಸುತ್ತಾ, ಲೇಖಕರು ಆರು ವಿಭಾಗಗಳಲ್ಲಿ ಸುಧಾ ಮೂರ್ತಿ ಅವರ ಸಾಹಿತ್ಯ ಮತ್ತು ಸಮಾಜಕ್ಕೆ ಕೊಟ್ಟಿರುವ ಕೊಡುಗೆಗಳನ್ನು ಅವಲೋಕಿಸಿದ್ದಾರೆ. ಸುಧಾಮೂರ್ತಿ ಅವರ ವೈವಿಧ್ಯಮಯ ವ್ಯಕ್ತಿತ್ವವನ್ನು ಪರಿಚಯಿಸುತ್ತಲೇ ಅವರ ಜೀವನದ ಕಿರುದರ್ಶನವನ್ನು ಕೃತಿಯು ಮಾಡಿದೆ ಎಂದು ಅಭಿಪ್ರಾಯಪಟ್ಟರು. ವಿದ್ಯಾ ರಾಮಕೃಷ್ಣ ಅವರ 'ಫ್ರಮ್ ವರ್ಡ್ಸ್ ಟು ನೋಬಲ್ ಡೀಡ್ಸ್ - ದ ಇನ್ಸ್ಪೈರಿಂಗ್ ಟೇಲ್ ಆಫ್ ಡಾ ಸುಧಾ ಮೂರ್ತಿ' ಕೃತಿಯಲ್ಲಿ ಎದ್ದು ಕಾಣುವ ಅಂಶ ಕೃತಿಕಾರರ ಭಾಷಾ ಪ್ರಾವೀಣ್ಯತೆ. ಕನ್ನಡ ಶಬ್ದಗಳಿಗೆ ಅಷ್ಟೇ ಸಶಕ್ತವಾದ ಆಂಗ್ಲ ಭಾಷೆಯ ಪದಗಳನ್ನು ಹುಡುಕಿ, ವ್ಯಾಕರಣಬದ್ಧವಾಗಿ, ಅರ್ಥಪೂರ್ಣವಾಗಿ, ವಾಕ್ಯರಚನೆಯನ್ನು ಲೀಲಾಜಾಲವಾಗಿ ಮಾಡಿದ್ದಾರೆ. ಇದೊಂದು ಸಮರ್ಪಕ ಅನುವಾದ ಕೃತಿ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಸಂಶೋಧನ ವಿದ್ಯಾರ್ಥಿ ಸುರೇಖಾ ಹರಿಪ್ರಸಾದ್ ಶೆಟ್ಟಿ ವಿಭಾಗದ ಸಹಪ್ರಾಧ್ಯಾಪಕರಾದ ಡಾ. ಪೂರ್ಣಿಮಾ ಶೆಟ್ಟಿ ಅವರ 'ನನ್ನ ಇತ್ತೀಚಿಗಿನ ಓದು' ಕೃತಿಯ ಕುರಿತು ಹೇಳುತ್ತಾ, ಕೃತಿಯು ಓದುಗರ ಸಾಹಿತ್ಯ ಜಗತ್ತಿನ ಅರಿವಿನ ಹಾದಿ ವಿಸ್ತರಿಸಲು ದಾರಿದೀವಿಗೆಯಂತಿದೆ. ಸರಳ ಸುಂದರ ನಿರೂಪಣೆಯೊಂದಿಗೆ ವರ್ಣನಾತ್ಮಕ ಹಾಗೂ ಗಹನ ವಿಚಾರ ವಿವೇಚನೆಯ ಹೂರಣ ಈ ಕೃತಿಯ ವೈಶಿಷ್ಟ್ಯವಾಗಿದೆ ಎಂದರು.

ಕಲಾ ಭಾಗ್ವತ್ ಅವರ 'ಜಾಲಂದರ' ಕೃತಿಯ ಪರಿಚಯವನ್ನು ಎಂ.ಎ.ವಿದ್ಯಾರ್ಥಿ ವಿಕ್ರಮ್ ಜೋಶಿ ಅವರು ಮಾಡಿದರು. 'ಜಾಲಂದರ' ಕೃತಿಯನ್ನು ನಾಲ್ಕು ವಿಭಾಗಗಳಲ್ಲಿ ಸಾಹಿತ್ಯಾಸಕ್ತರು ಓದಬಹುದು. ಇದರಲ್ಲಿ ಸಾಹಿತ್ಯ ವಿಮರ್ಶೆಯ ಕುರಿತಾದ ಲೇಖನಗಳು, ವಿಮರ್ಶಕರ ಸಂದರ್ಶನ ಮತ್ತು ವಿಚಾರಗಳು, ವ್ಯಕ್ತಿ ಚಿತ್ರಣಗಳು, ಕನ್ನಡ ಸಂಶೋಧನೆಗೆ ಮುಂಬೈ ಕೊಡುಗೆ ಮತ್ತು ಮುಂಬೈ ವಿವಿ ಸುತ್ತ ಬರೆದ ಲೇಖನಗಳಿವೆ. ಮೊದಲ ಬಾರಿಗೆ ಬರೆಯುವ ಬರಹಗಾರರಿಗೆ ಇದು ಮಾದರಿ ಕೃತಿಯಾಗಬಲ್ಲದು ಎಂದು ಅವರು ನುಡಿದರು. ಇದೇ ಸಂದರ್ಭದಲ್ಲಿ ವಿಭಾಗದ ನಲ್ವತ್ತಾರರ ಸಂಭ್ರಮದ ಅಂಗವಾಗಿ ಕರ್ನಾಟಕ ಮಲ್ಲದ ಸಂಪಾದಕರಾದ ಚಂದ್ರಶೇಖರ ಪಾಲೆತ್ತಾಡಿ ಅವರಿಂದ ಉಪನ್ಯಾಸ, ನಿರಂಜನ ಸಂಸ್ಮರಣೆ, ಮುಂಬೈ ವಿಶ್ವವಿದ್ಯಾಲಯದ ಸಾಧಕರಿಗೆ ಗೌರವ ಕಾರ್ಯಕ್ರಮ, ಶೋಧಸಿರಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮಗಳು ನೆರವೇರಿದವು. ವಿಭಾಗದ ಸಹಪ್ರಾಧ್ಯಾಪಕರಾದ ಡಾ ಪೂರ್ಣಿಮಾ ಶೆಟ್ಟಿ ಅವರು ಕಾರ್ಯಕ್ರಮವನ್ನು ಸಂಯೋಜಿಸಿ, ನಿರೂಪಿಸಿದರು. ನಗರದ ಗಣ್ಯರು, ಸಾಹಿತ್ಯಾಭಿಮಾನಿಗಳು, ವಿದ್ಯಾರ್ಥಿಗಳು ಹಾಜರಿದ್ದರು.

ಭಾಷೆಗಳ ಗುಂಪಿನ ಇತಿಹಾಸವನ್ನು ಗುರುತಿಸುವುದು ಸಾಧ್ಯವೇ?

- ಭಾಷಾ ಸಂಶೋಧನೆ

ಹೌದು. ಎಲ್ಲಾ ಅಥವಾ ಬಹುತೇಕ ಎಲ್ಲಾ ಭಾಷೆಗಳಲ್ಲಿ ಕಂಡುಬರುವ ಪದಗಳ ಸಾಮಾನ್ಯ ಪಟ್ಟಿಗಳನ್ನು ಬಳಸುವುದರಿಂದ, ಭಾಷಾಶಾಸ್ತ್ರಜ್ಞರು ಸಾಮಾನ್ಯ ಪೂರ್ವಜರ ಪದಗಳಿಂದ ಬಂದ ಪದಗಳ ಹಂಚಿದ ಕಾಗ್ನೇಟ್ ಪದಗಳನ್ನು ಗುರುತಿಸಬಹುದು - ಸಾಮಾನ್ಯ ಪೂರ್ವಜರ ಜೀನ್ ಅನ್ನು ಹಂಚಿಕೊಳ್ಳುವ ಏಕರೂಪದ ಜೀನ್‌ಗಳನ್ನು ಗುರುತಿಸಲು ಸಾಧ್ಯವಿದೆ . ಉದಾಹರಣೆಗೆ ಸ್ಪ್ಯಾನಿಷ್ ಮಾನೋ ('ಕೈ') ಮತ್ತು ಫ್ರೆಂಚ್ ಮುಖ್ಯವು ಹಿಂದಿನ ಲ್ಯಾಟಿನ್ ಮನುಸ್‌ನಿಂದ ಬಂದವು , ಆದರೆ ಇಂಗ್ಲಿಷ್ ಮತ್ತು ಜರ್ಮನ್ ಪದಗಳು ಹಾಗಲ್ಲ ಅಲ್ಲ. ಕಾಗ್ನೇಟ್ ಸೆಟ್ ಸಂಬಂಧಿತ ಭಾಷೆಗಳ ಗುಂಪುಗಳನ್ನು ಗುರುತಿಸುತ್ತದೆ. ಇಲ್ಲಿ ಉದಾಹರಣೆಯಲ್ಲಿ ಮನೋ ಮತ್ತು ಮುಖ್ಯ ರೋಮ್ಯಾನ್ಸ್ ಭಾಷೆಗಳು (ಸ್ಪ್ಯಾನಿಷ್, ಫ್ರೆಂಚ್, ಇಟಾಲಿಯನ್, ಪೋರ್ಚುಗೀಸ್) ಎಂದು ಕರೆಯಲ್ಪಡುವದನ್ನು ಗುರುತಿಸುತ್ತವೆ ಮತ್ತು ಕೈ ಮತ್ತು ಕೈಗಳು ಜರ್ಮನಿಕ್ ಭಾಷೆಗಳನ್ನು ಗುರುತಿಸುತ್ತವೆ ಸೂಕ್ತವಾದ ಅಂಕಿಅಂಶಗಳ ಮಾದರಿಗಳೊಂದಿಗೆ ಹಲವಾರು ವಿಭಿನ್ನ ಕಾಗ್ನೇಟ್ ಸೆಟ್‌ಗಳಲ್ಲಿನ ಮಾಹಿತಿಯನ್ನು ಸಂಯೋಜಿಸುವ ಮೂಲಕ , ವಿವರವಾದ ಕುಟುಂಬದ ಇತಿಹಾಸಗಳನ್ನು ಅಥವಾ ಭಾಷಾ ಕುಟುಂಬಗಳ ಫೈಲೋಜೆನೆಟಿಕ್ ಮರಗಳನ್ನು ಊಹಿಸಲು ಸಾಧ್ಯವಿದೆ, ಉದಾಹರಣೆಗೆ ಇಂಡೋ-ಯುರೋಪಿಯನ್ ಭಾಷೆಗಳಿಗೆ . ಈ ಫೈಲೋಜೆನಿಗಳು ಜೈವಿಕ ಜಾತಿಗಳ ಫೈಲೋಜೆನಿಗಳಿಗೆ ನೇರವಾಗಿ ಹೋಲುತ್ತವೆ.

ಸರಿಸುಮಾರು 400 ಅಥವಾ ಅದಕ್ಕಿಂತ ಹೆಚ್ಚಿನ ಇಂಡೋ-ಯುರೋಪಿಯನ್ ಭಾಷೆಗಳ ಸಣ್ಣ ಉಪವಿಭಾಗದ ಫೈಲೋಜೆನೆಟಿಕ್ ಮರ. ಭಾಷೆಗಳು 'ಕೈ' ಎಂಬ ಅರ್ಥಕ್ಕಾಗಿ ಬಳಸುವ ಪದಗಳು ಕಾಗ್ನೇಟ್ ವರ್ಗಗಳನ್ನು ಗುರುತಿಸಲು ಬಣ್ಣ-ಕೋಡೆಡ್ ಆಗಿರುತ್ತವೆ. ಶಾಖೆಗಳ ಉದ್ದಕ್ಕೂ ಇರುವ ಆಯತಗಳು ಮರದ ಪ್ರದೇಶಗಳನ್ನು ಗುರುತಿಸುತ್ತವೆ, ಅಲ್ಲಿ ಹೊಸ ಕಾಗ್ನೇಟ್ ವರ್ಗಗಳು ಹುಟ್ಟಿಕೊಂಡಿರಬಹುದು. ಇಲ್ಲಿ ಫ್ರೆಂಚ್ ಮತ್ತು ಸ್ಪ್ಯಾನಿಷ್ ಭಾಷೆಗಳು ಹಿಂದಿನ ಲ್ಯಾಟಿನ್ ರೂಪವಾದ 'ಮನುಸ್' ನಿಂದ ಪಡೆದ 'ಕೈ' ಗಾಗಿ ಕಾಗ್ನೇಟ್ ರೂಪಗಳನ್ನು ಹಂಚಿಕೊಳ್ಳುತ್ತವೆ. ಫ್ರೆಂಚ್ ಮತ್ತು ಸ್ಪ್ಯಾನಿಷ್ ರೋಮ್ಯಾನ್ಸ್ ಭಾಷೆಗಳ ಪರಿಚಿತ ಗುಂಪಿನ ಭಾಗವಾಗಿದೆ. ಹೋಲಿಕೆಯಲ್ಲಿ, 'ಕೈ' ಪದವು ಇಂಗ್ಲಿಷ್ ಮತ್ತು ಜರ್ಮನ್ ನಡುವೆ ಸಂಯೋಜಿತವಾಗಿದೆ ಮತ್ತು ಈ ಕಾಗ್ನೇಟ್ ವರ್ಗವು ಜರ್ಮನಿಕ್ ಭಾಷೆಗಳ ಗುಂಪಿನ ಭಾಗವನ್ನು ಗುರುತಿಸುತ್ತದೆ. ಗ್ರೀಕ್‌ನಲ್ಲಿನ 'ಕೈ' ಪದಗಳು ಮತ್ತು ಅಳಿವಿನಂಚಿನಲ್ಲಿರುವ ಅನಾಟೋಲಿಯನ್ ಭಾಷೆಗಳಲ್ಲಿ ಹಿಟ್ಟೈಟ್ ಮತ್ತು ಟೋಚರಿಯನ್ ಎರಡು ಹೆಚ್ಚುವರಿ ಕಾಗ್ನೇಟ್ ಸೆಟ್‌ಗಳನ್ನು ರೂಪಿಸುತ್ತವೆ. ವಿವಿಧ ಶಬ್ದಕೋಶದ ವಸ್ತುಗಳಿಂದ ಹಲವಾರು ವಿಭಿನ್ನ ಕಾಗ್ನೇಟ್ ಸೆಟ್‌ಗಳನ್ನು ಒಟ್ಟುಗೂಡಿಸುವುದರಿಂದ sತನಿಖಾಧಿಕಾರಿಗಳು ಇಡೀ ಭಾಷಾ ಕುಟುಂಬಗಳ ವಿವರವಾದ ಫೈಲೋಜೆನೆಟಿಕ್ ಮರಗಳನ್ನು ಸೆಳೆಯಲು ಅನುವು ಮಾಡಿಕೊಡುತ್ತದೆ

ಜೀನ್‌ಗಳು ಮತ್ತು ಭಾಷೆಯು ಯಾವ ಇತರ ವಿಕಸನೀಯ ಲಕ್ಷಣಗಳನ್ನು ಹಂಚಿಕೊಳ್ಳುತ್ತವೆ?

ಭಾಷಾಶಾಸ್ತ್ರ ಮತ್ತು ಜೈವಿಕ ವಿಕಸನವು ಮಾರ್ಪಾಡು ಮತ್ತು ಆಯ್ಕೆಯೊಂದಿಗೆ ಸಂತತಿಯನ್ನು ಮೀರಿದ ವೈಶಿಷ್ಟ್ಯಗಳನ್ನು ಹಂಚಿಕೊಳ್ಳುತ್ತದೆ, ರೂಪಾಂತರ ಮತ್ತು ಪ್ರತಿಕೃತಿಯ ಕಾರ್ಯವಿಧಾನಗಳು, ಸ್ಪೆಸಿಯೇಶನ್, ಡ್ರಿಫ್ಟ್ ಮತ್ತು ಸಮತಲ ವರ್ಗಾವಣೆ. ಆಳವಾದ ಮಟ್ಟದಲ್ಲಿ, ಜೀನ್‌ಗಳು ಮತ್ತು ಭಾಷೆಗಳನ್ನು ಆನುವಂಶಿಕತೆಯ ಡಿಜಿಟಲ್ ವ್ಯವಸ್ಥೆಗಳಾಗಿ ಪ್ರತಿನಿಧಿಸಬಹುದು, ಇದು ಜೈವಿಕ ಜೀವಿಗಳ ಸಂದರ್ಭದಲ್ಲಿ ಜೀನ್‌ಗಳು ಮತ್ತು ಭಾಷೆಯ ಸಂದರ್ಭದಲ್ಲಿ ಪದಗಳ ಪ್ರತ್ಯೇಕ ಭಾಗಗಳ ಪ್ರಸರಣದಲ್ಲಿ ನಿರ್ಮಿಸಲಾಗಿದೆ. ಜೀನ್‌ಗಳು ಪ್ರತಿಯಾಗಿ ನಾಲ್ಕು ಬೇಸ್‌ಗಳು ಅಥವಾ ನ್ಯೂಕ್ಲಿಯೊಟೈಡ್‌ಗಳ (A, C, G, T) ಸಂಯೋಜನೆಗಳನ್ನು ಒಳಗೊಂಡಿರುತ್ತವೆ, ಆದರೆ ಪದಗಳನ್ನು ಪ್ರತ್ಯೇಕವಾದ ಶಬ್ದಗಳು ಅಥವಾ ಫೋನ್‌ಗಳ ಸಂಯೋಜನೆಯಂತೆ ರೂಪಿಸಬಹುದು (ವಾಸ್ತವವಾಗಿ, ಫೋನ್‌ಗಳು ಅಥವಾ ಶಬ್ದಗಳು ನಿರಂತರ ಜಾಗದಲ್ಲಿ ಬದಲಾಗುತ್ತವೆ ಆದರೆ ಭಾಷೆಗಳನ್ನು ಸಾಮಾನ್ಯವಾಗಿ ಪ್ರತಿನಿಧಿಸಲಾಗುತ್ತದೆ. ಪ್ರತ್ಯೇಕವಾದ ಫೋನೆಮ್‌ಗಳ ನಿರ್ದಿಷ್ಟ ಗುಂಪನ್ನು ವ್ಯಕ್ತಪಡಿಸುವಂತೆ).

ಜೈವಿಕ ಮತ್ತು ಭಾಷಾ ವಿಕಾಸದ ನಡುವಿನ ಕೆಲವು ಸಮಾನಾಂತರಗಳು:
ಈ ಸಾಮ್ಯತೆಗಳ ಅರ್ಥವೇನೆಂದರೆ, 'ಆರಲ್ ಡಿಎನ್‌ಎ'ಗೆ ಸಮಾನವಾದ ಮಾಹಿತಿಯ ಪ್ರಸರಣಕ್ಕಾಗಿ ನಾವು ಭಾಷೆಯನ್ನು ಯೋಚಿಸಬಹುದು ಮತ್ತು ಮಾಡಬೇಕು. ಜೆನೆಟಿಕ್ಸ್‌ನಲ್ಲಿ ಸಂಯೋಜಿತ ವಿಕಸನದ ವಿಲಕ್ಷಣ ವಿದ್ಯಮಾನವೂ ಸಹ-ಒಂದು ಜೀನ್‌ನಲ್ಲಿ ಒಂದು ನಿರ್ದಿಷ್ಟ ಸ್ಥಳದಲ್ಲಿ ನ್ಯೂಕ್ಲಿಯೊಟೈಡ್ ಬದಲಿ ತ್ವರಿತವಾಗಿ ಅದೇ ಸ್ಥಳದಲ್ಲಿ ಅದೇ ನ್ಯೂಕ್ಲಿಯೊಟೈಡ್ ಬದಲಿಯಾಗಿ ಇತರ, ವಿಶಿಷ್ಟವಾಗಿ ಸಂಬಂಧಿಸಿದ, ಜೀನ್‌ಗಳಲ್ಲಿ-ಭಾಷೆಯಲ್ಲಿಯೂ ಸಹ ಕಂಡುಬರುತ್ತದೆ. ನಿಯಮಿತ ಧ್ವನಿ ಬದಲಾವಣೆ ಎಂದು ಕರೆಯಲಾಗುತ್ತದೆ , ಲೆಕ್ಸಿಕಾನ್ [27 , 28] ನಲ್ಲಿ ಅನೇಕ ಪದಗಳಲ್ಲಿ ಅದೇ ಇತರ ಫೋನ್‌ಗೆ ತುಲನಾತ್ಮಕವಾಗಿ ಕಡಿಮೆ ಅವಧಿಯಲ್ಲಿ ನಿರ್ದಿಷ್ಟ ಫೋನ್ ಅಥವಾ ಧ್ವನಿ ಬದಲಾಗುತ್ತದೆ . ಒಂದು ಪ್ರಸಿದ್ಧ ಉದಾಹರಣೆಯೆಂದರೆ ಜರ್ಮನಿಕ್ ಭಾಷೆಗಳಲ್ಲಿ p → f ಧ್ವನಿ ಬದಲಾವಣೆ, ಅಲ್ಲಿ ಹಳೆಯ ಇಂಡೋ-ಯುರೋಪಿಯನ್ p ಧ್ವನಿಯನ್ನು f ಧ್ವನಿಯಿಂದ ಬದಲಾಯಿಸಲಾಯಿತು , ಉದಾಹರಣೆಗೆ pater → ಫಾದರ್ ; ಅಥವಾ ಪೆಸ್, ಪೆಡಿಸ್ → ಕಾಲು .

ಮಾನವ ಇತಿಹಾಸವನ್ನು ಪತ್ತೆಹಚ್ಚಲು ಭಾಷೆಗೆ ಬದಲಾವಣೆಗಳನ್ನು ಬಳಸಬಹುದೇ?

ಪ್ರಸ್ತುತ ಪ್ರಪಂಚದಾದ್ಯಂತ ಮಾತನಾಡುವ ಸುಮಾರು 7000 ಭಾಷೆಗಳಿವೆ, ಅಂದರೆ, ವಿಚಿತ್ರವಾಗಿ, ನಮ್ಮಲ್ಲಿ ಹೆಚ್ಚಿನವರು ನಮ್ಮ ಜಾತಿಯ ಇತರ ಸದಸ್ಯರೊಂದಿಗೆ ಸಂವಹನ ನಡೆಸಲು ಸಾಧ್ಯವಿಲ್ಲ! ಈ ಸಂಖ್ಯೆಯು ಪ್ರಾಯಶಃ ಸುಮಾರು 10,000 ವರ್ಷಗಳ ಹಿಂದೆ ಸಂಭವಿಸಬಹುದಾದ ಮಾನವ ಭಾಷಾ ವೈವಿಧ್ಯತೆಯ ಉತ್ತುಂಗಕ್ಕಿಂತ ಕಡಿಮೆಯಾಗಿದೆ, ಇದು ಕೃಷಿಯ ಆವಿಷ್ಕಾರಕ್ಕೆ ಸ್ವಲ್ಪ ಮೊದಲು ಆ ಸಮಯದ ಮೊದಲು, ಎಲ್ಲಾ ಮಾನವ ಗುಂಪುಗಳು ಬೇಟೆಗಾರ-ಸಂಗ್ರಹಕಾರರಾಗಿದ್ದರು, ಸಣ್ಣ ಸಂಚಾರಿ ಬುಡಕಟ್ಟು ಸಮಾಜಗಳಲ್ಲಿ ವಾಸಿಸುತ್ತಿದ್ದರು. ಕೃಷಿ ಸಮಾಜಗಳು ಜನಸಂಖ್ಯಾಶಾಸ್ತ್ರೀಯವಾಗಿ ಹೆಚ್ಚು ಸಮೃದ್ಧವಾಗಿದ್ದವು ಮತ್ತು ಗುಂಪು ಗಾತ್ರಗಳು ಬೇಟೆಗಾರ-ಸಂಗ್ರಹಕಾರರಿಗಿಂತ ದೊಡ್ಡದಾಗಿದ್ದವು, ಆದ್ದರಿಂದ ಕೃಷಿಕರ ವಿಸ್ತರಣೆಯು ಅನೇಕ ಸಣ್ಣ ಭಾಷಾ ಗುಂಪುಗಳನ್ನು ಬದಲಿಸುತ್ತದೆ. ಇಂದು, ಕೆಲವು ಬೇಟೆಗಾರ-ಸಂಗ್ರಹಿಸುವ ಸಮಾಜಗಳು ಉಳಿದಿವೆ ಆದ್ದರಿಂದ ನಮ್ಮ ಭಾಷಾ ವೈವಿಧ್ಯತೆಯು ನಮ್ಮ ತುಲನಾತ್ಮಕವಾಗಿ ಇತ್ತೀಚಿನ ಕೃಷಿ ಭೂತಕಾಲವನ್ನು ಪ್ರತಿಬಿಂಬಿಸುತ್ತದೆ.

ಕೃಷಿಯ ಹರಡುವಿಕೆಯಂತಹ ಮಾನವ ಇತಿಹಾಸದ ಪ್ರಶ್ನೆಗಳನ್ನು ತನಿಖೆ ಮಾಡಲು ಭೌಗೋಳಿಕ ಮಾಹಿತಿ ಅಥವಾ ಸಾಂಸ್ಕೃತಿಕ ಆಚರಣೆಗಳ ಮಾಹಿತಿಯೊಂದಿಗೆ ಭಾಷೆಗಳ ಫಿಲೋಜೆನಿಗಳನ್ನು ಬಳಸಬಹುದು. ಇಂಡೋ-ಯುರೋಪಿಯನ್ನರು] ಸೇರಿದಂತೆ ರೈತರು/ಮೀನುಗಾರಿಕೆ ಜನಸಂಖ್ಯೆಯ ಗುಂಪುಗಳ ಸಮಯ, ಕಾರಣಗಳು ಮತ್ತು ಭೌಗೋಳಿಕ ಹರಡುವಿಕೆಯನ್ನು ಅಧ್ಯಯನ ಮಾಡಲು ಭಾಷಾ ಕುಟುಂಬಗಳ ಫೈಲೋಜೆನಿಗಳನ್ನು ಬಳಸಲಾಗಿದೆ ; ಆಸ್ಟ್ರೋನೇಷಿಯನ್ ಜನರು ಪೆಸಿಫಿಕ್‌ನ ಆಕ್ರಮಣದ ವೇಗ ; ಮತ್ತು ಆಫ್ರಿಕಾದ ಮೂಲಕ ಬಂಟು-ಮಾತನಾಡುವ ಜನರ ವಲಸೆ ಮಾರ್ಗಗಳು

ವಿಕಾಸ ಮತ್ತು ಹರಡುವಿಕೆ , ಧಾರ್ಮಿಕ ಮತ್ತು ರಾಜಕೀಯ ಆಚರಣೆಗಳ ನಡುವಿನ ಸಂಬಂಧಗಳು, ರಾಜಕೀಯ ರಚನೆಗಳು ಮತ್ತು ಕಾಲ್ಪನಿಕ ಕಥೆಗಳ ವಯಸ್ಸು ಸೇರಿದಂತೆ ಮಾನವ ಸಾಂಸ್ಕೃತಿಕ ವಿಕಾಸದ ಪ್ರಶ್ನೆಗಳನ್ನು ತನಿಖೆ ಮಾಡಲು ಭಾಷಾಶಾಸ್ತ್ರದ ಫೈಲೋಜೆನಿಗಳನ್ನು ಬಳಸಲಾಗುತ್ತದೆ. ಗೆ ದಿನಾಂಕವನ್ನು ಸಹ ಒದಗಿಸಿದ್ದಾರೆ .

ನಮ್ಮ ಜಾತಿಯ ಯಶಸ್ಸಿನಲ್ಲಿ ಭಾಷೆ ಯಾವ ಪಾತ್ರವನ್ನು ವಹಿಸಿದೆ?

ನಮ್ಮ ಜಾತಿಗಳ ಇತಿಹಾಸದಲ್ಲಿ ಭಾಷೆಯು ಪ್ರಮುಖ ಮತ್ತು ಪ್ರಾಯಶಃ ಪೂರ್ವ-ಪ್ರಮುಖ ಪಾತ್ರವನ್ನು ವಹಿಸಿದೆ. ಎಲ್ಲಾ ಇತರ ಜಾತಿಗಳು ಪರಿಸರದಲ್ಲಿ ಕಂಡುಬರುವ ಪ್ರವೃತ್ತಿಯನ್ನು ಪರಿಗಣಿಸಿ, ಅವುಗಳ ಜೀನ್‌ಗಳು ಅವುಗಳನ್ನು ಹೊಂದಿಕೊಳ್ಳುತ್ತವೆ, ಮಾನವರು ಸಾಂಸ್ಕೃತಿಕ ಮಟ್ಟದಲ್ಲಿ ಹೊಂದಿಕೊಳ್ಳಬಹುದು, ಜ್ಞಾನವನ್ನು ಪಡೆದುಕೊಳ್ಳಬಹುದು ಮತ್ತು ವೈವಿಧ್ಯಮಯ ಆವಾಸಸ್ಥಾನಗಳಲ್ಲಿ ಬದುಕುಳಿಯಲು ಅಗತ್ಯವಾದ ಉಪಕರಣಗಳು, ಆಶ್ರಯಗಳು, ಬಟ್ಟೆ ಮತ್ತು ಇತರ ಕಲಾಕೃತಿಗಳನ್ನು ಉತ್ಪಾದಿಸಬಹುದು . ಹೀಗಾಗಿ, ಚಿಂಪಾಂಜಿಗಳು ಆಫ್ರಿಕಾದ ದಟ್ಟವಾದ ಕಾಡುಗಳಲ್ಲಿ ಕಂಡುಬರುತ್ತವೆ ಆದರೆ ಸವನ್ನಾ ಅಥವಾ ಮರುಭೂಮಿಗಳು ಅಥವಾ ಶೀತ ಪ್ರದೇಶಗಳಲ್ಲಿ ಕಂಡುಬರುವುದಿಲ್ಲ; ಒಂಟೆಗಳು ಒಣ ಪ್ರದೇಶಗಳಲ್ಲಿ ಕಂಡುಬರುತ್ತವೆ ಆದರೆ ಕಾಡುಗಳಲ್ಲಿ ಅಥವಾ ಪರ್ವತದ ತುದಿಗಳಲ್ಲಿ ಕಂಡುಬರುವುದಿಲ್ಲ, ಮತ್ತು ಇತರ ಜಾತಿಗಳಿಗೆ. ಮತ್ತೊಂದೆಡೆ, ಮಾನವರು, ಬಹುಶಃ ಆಫ್ರಿಕನ್ ಸವನ್ನಾಗಳಲ್ಲಿ ವಿಕಸನಗೊಂಡ ಜಾತಿಗಳ ಹೊರತಾಗಿಯೂ, ಭೂಮಿಯ ಮೇಲಿನ ಪ್ರತಿಯೊಂದು ಆವಾಸಸ್ಥಾನವನ್ನು ಆಕ್ರಮಿಸಿಕೊಳ್ಳಲು ಸಮರ್ಥರಾಗಿದ್ದಾರೆ. ನಮ್ಮ ನಡವಳಿಕೆಯು ಜೈವಿಕ ಜಾತಿಗಳ ಸಂಗ್ರಹದಂತಿದೆ . ಏಕೆ ಈ ಗಮನಾರ್ಹ ವ್ಯತ್ಯಾಸ?

ಇದು ಬಹುಶಃ ಭಾಷೆಗೆ ಸಂಬಂಧಿಸಿದೆ. ಭಾಷೆಯನ್ನು ಹೊಂದಿರುವ ಮಾನವರು ತಲೆಮಾರುಗಳವರೆಗೆ ವಿವರವಾದ ಮಾಹಿತಿಯನ್ನು ರವಾನಿಸಲು ಉನ್ನತ-ನಿಷ್ಠೆಯ ಕೋಡ್ ಅನ್ನು ಹೊಂದಿದ್ದಾರೆ. ನಮ್ಮ ದಿನನಿತ್ಯದ ಜೀವನದಲ್ಲಿ ನಾವು ಬಳಸುವ ಹೆಚ್ಚಿನವುಗಳು, ಹೆಚ್ಚಿನವುಗಳಲ್ಲದಿದ್ದರೂ, ಉತ್ಪಾದಿಸಲು ವಿಶೇಷ ಜ್ಞಾನ ಅಥವಾ ಕೌಶಲ್ಯಗಳನ್ನು ಅವಲಂಬಿಸಿವೆ. ಇವುಗಳ ಹಿಂದಿನ ಮಾಹಿತಿಯನ್ನು ಐತಿಹಾಸಿಕವಾಗಿ ಮೌಖಿಕ ಸೂಚನೆಗಳಲ್ಲಿ ಕೋಡ್ ಮಾಡಲಾಗಿದೆ ಮತ್ತು ಬರವಣಿಗೆಯ ಆಗಮನದೊಂದಿಗೆ ಅದನ್ನು ಸಂಗ್ರಹಿಸಬಹುದು ಮತ್ತು ಹೆಚ್ಚು ಸಂಕೀರ್ಣವಾಗಬಹುದು.

ಭಾಷೆಯನ್ನು ಹೊಂದುವುದು, ನಮ್ಮ ಇತಿಹಾಸದುದ್ದಕ್ಕೂ ಒಂದು ಜಾತಿಯಾಗಿ ಒಂದರ ಮೇಲೊಂದರಂತೆ ಸಂಗ್ರಹವಾಗಿರುವ ಅತ್ಯಾಧುನಿಕ ಸಾಂಸ್ಕೃತಿಕ ರೂಪಾಂತರಗಳನ್ನು ಉತ್ಪಾದಿಸುವ ಮಾನವರ ಸಾಮರ್ಥ್ಯದ ಹಿಂದೆ ಇದೆ. ಇಂದು ಈ ಸಾಮರ್ಥ್ಯದ ಪರಿಣಾಮವಾಗಿ, ನಮ್ಮಲ್ಲಿ ಕೆಲವರು ಅರ್ಥಮಾಡಿಕೊಳ್ಳುವ ತಂತ್ರಜ್ಞಾನಗಳಿಂದ ತುಂಬಿರುವ ಜಗತ್ತಿನಲ್ಲಿ ನಾವು ವಾಸಿಸುತ್ತಿದ್ದೇವೆ. ಸಂಸ್ಕೃತಿ, ಭಾಷೆಯ ಬೆನ್ನಿನ ಮೇಲೆ ಸವಾರಿ ಮಾಡುವುದರಿಂದ, ಜೀನ್‌ಗಳಿಗಿಂತ ಹೆಚ್ಚು ವೇಗವಾಗಿ ವಿಕಸನಗೊಳ್ಳಬಹುದು, ನಮ್ಮ ಸಾಂಸ್ಕೃತಿಕ ವೈವಿಧ್ಯತೆಗೆ ವ್ಯತಿರಿಕ್ತವಾಗಿ ಮಾನವೀಯತೆಯ ಸಾಪೇಕ್ಷ ಅನುವಂಶಿಕ ಏಕರೂಪತೆಯು ನಮ್ಮ 'ಆರಲ್ ಡಿಎನ್‌ಎ' ಬಹುಶಃ ನಮ್ಮ ಸಣ್ಣ ಇತಿಹಾಸದಲ್ಲಿ ಜೀನ್‌ಗಳಿಗಿಂತ ಹೆಚ್ಚು ಮಹತ್ವದ್ದಾಗಿದೆ ಎಂದು ತೋರಿಸುತ್ತದೆ.

ಡ್ಯಾನಿಯಲಾಯಣ"

✍ ಸಿ. ಎಸ್. ದಿನೇಶ್

ನಮ್ಮ ದೇಶದ ಸಣ್ಣ ಸಣ್ಣ ಸ್ಥಳಗಳಲ್ಲಿ ಹುಟ್ಟಿ ಬೆಳೆದು ಜೀವನ ಪರ್ಯಂತ ಪಕ್ಕದ ಊರಿಗೂ ಹೋಗುವ ಪ್ರಯತ್ನ ಮಾಡದೆ ತಮ್ಮ ಜೀವನ ಸವೆಸಿರುತ್ತಾರೆ. ಇವರ ಜೀವನ ಶೈಲಿ ಹೇಗೆ? ಪ್ರತಿಯೊಬ್ಬರಿಗೂ ತಮ್ಮದೇ ಬೆರಳಿನ ಮುದ್ರೆ ಮತ್ತು ಧ್ವನಿ ಇರುವುದು ಒಂದುವೈಶಿಷ್ಯತೆ ಹಾಗೂ ಸಹಜ. ಹೀಗಾಗಿ ಪ್ರತಿ ಜೀವಿಯ ನಡೆನುಡಿ ವಿಶೇಷವೇ ಅಲ್ಲವೇ?

ಇಲ್ಲೊಬ್ಬ ವ್ಯಕ್ತಿಯಚಿತ್ರಣ ನನಗೆ ಬಾಲ್ಯದಲ್ಲಿ ಬಹಳವೇ ಪ್ರಭಾವ ಬೀರಿತ್ತು. ಅವನ ಬಗ್ಗೆ ನನ್ನ ಮನಸಿಗೆ ಅಷ್ಟು ಹಚ್ಚಿಕೊಳ್ಳುವ ಕಾರಣವಾದರೂ ಏನು? ನಾನು ಅವನ ಬಗ್ಗೆ ಕುತೂಹಲ ಬೆಳಸಲು ಕಾರಣವಾದರೂ ಏನು? ಈ ಪ್ರಶ್ನೆಗೆ ಉತ್ತರವೇ ಈ ಕಿರು ಲೇಖನ. ಅದೇ ವ್ಯಕ್ತಿ ಡ್ಯಾನಿಯಲ್ ಎಂಬ ಕಾರ್ಪೆಂಟರ್ ಬಗ್ಗೆ ಬರೆದಿದ್ದೇನೆ. ನಾನು ಅವನನ್ನು ಮೊದಲು ನೋಡಿದಾಗ ನನಗೆ ಆರು ವರ್ಷ. ಅವನನ್ನು ನನ್ನ ತಾಯಿ ತಮ್ಮ ಬಾಲ್ಯದಿಂದ ನೋಡುತ್ತಿದ್ದರಂತೆ. ನನಗೆ ಸುಮಾರು ಹತ್ತೊಂಬತ್ತು ವರ್ಷವಾದಾಗ ಕೆಲಸಕ್ಕಾಗಿ ಮುಂಬಯಿಗೆ ಬಂದು ಅವನ ಸಂಪರ್ಕ ತಪ್ಪಿತು. ನಾನು ನೋಡಿದ ಹಾಗೆ ನಮ್ಮ ಮನೆಯ ಕೊಟ್ಟಿಗೆಯಲ್ಲಿ ಕೆಲವು ಸಲ ಮಲಗುತ್ತಿದ್ದ. ಅವನಿಗೆ ಸಂಸಾರವಿರಲಿಲ್ಲ ಮನೆಯಾಗಲಿ ಅಥವಾ ಬಳಗದವರೂ ಇರಲಿಲ್ಲ. ಅವನಿಗೆ ತನ್ನದೇ ಆಗಿ ಸ್ವಂತಕ್ಕಾಗಿ ವಾಸಿಸಲು ಕೋಣೆಯಿರಲಿಲ್ಲ. ನನ್ನ ತಾಯಿಯವರ ಹತ್ತಿರ ಅವನ ಬಗ್ಗೆ ಕೇಳಲು ಅವರು ತಮ್ಮನೆನಪುಗಳನ್ನು ತಿಳಿಸಿದರು. ಅವನು ಯಾರ ಜೊತೆಯೂ ಸೇರುತ್ತಿರಲಿಲ್ಲ. ಅವನು ನನ್ನ ತಾಯಿಯವರ ವಯೋಲಿನನ್ನಲ್ಲಿ ಕೈಯಾಡಿಸುತ್ತ "ನೀನೆ ನನ್ನ ಶೇಖರ ಏಸು ರಾಜಶೇಖರ " ಎಂದು ಹಾಡುತ್ತಿದ್ದನಂತೆ. ನಾನು ನೋಡಿದ ಹಾಗೆ ಅವನು ಹೆಚ್ಚು ಮಾತನಾಡುತ್ತಿರಲಿಲ್ಲ, ನಗುತ್ತಿರಲಿಲ್ಲ. ಅವನು ಸಂತನಂತಿದ್ದ. ಹಾಗೆಯೇ ಅವನು ಯಾರ ಜೊತೆಯೂ ವಾಗ್ವಾದ ಮಾಡುತ್ತಿದ್ದದನ್ನು ನಾನು ನೋಡಿರಲಿಲ್ಲ. ನಾನು ನೋಡುತ್ತಿದ್ದ ಹಾಗೆ ಆಗಿನ ದಿನಗಳಲ್ಲಿ ಅವನಿಗೆ ದಿನಕೂಲಿ ಎರಡು ರೂಪಾಯಿ ಇರುತಿತ್ತು ಅವನ ಜೊತೆಗೆ ಸಹಾಯಕ್ಕೆ ಯಾರೂ ಇರುತ್ತಿರಲಿಲ್ಲ ಯಾವಾಗಲೂ ಒಬ್ಬನೇ ಕೆಲಸ ಮಾಡುತ್ತಿದ್ದ. ನಿನಗೆ ಹೆಚ್ಚು ಹಣ ಬೇಕಾದರೆ ಏನು ಮಾಡುತ್ತೀ ಎನ್ನಲು ತುಂಬು ಹೃದಯದಿಂದ ದಿನವೂ ಬಿಡದೆ ರಸ್ತೆಯಿಂದ ಸಗಣಿ ಶೇಕರಿಸುತ್ತಿದ್ದೇನೆ. ಮೂರು ತಿಂಗಳಲ್ಲಿಅದು ನಾಲ್ಕು ಗುಂಟೆಗೆ ಸಾಕಾಗುತ್ತೆ ಎನ್ನುತ್ತಿದ್ದ.

ಅವನು ಸಗಣಿ ಹಲವಾರು ಕಡೆಗಳಲ್ಲಿ ಸಂಗ್ರಹಿಸಿ ಬೇರೆ ಬೇರೆ ಕಡೆಗಳಲ್ಲಿ ಇಡುತ್ತಿದ್ದ. ಈ ಗೊಬ್ಬರಕ್ಕೆ ಗಿರಾಕಿಗಳು ಇರುತ್ತಿದ್ದರು. ನಿನ್ನ ಹತ್ತಿರ ಎಷ್ಟು ಗೊಬ್ಬರ ಇದೆ ಎಂದು ಕೇಳಿದರೆ ನೆಲದಿಂದ 20 ಇಂಚು ಎತ್ತರದಲ್ಲಿ ಹಸ್ತ ಹಿಡಿದು ಇಷ್ಟೆತ್ತರ ಎಂದು ಹೇಳಿ ಈ ತರಹದ ಆರುಗುಡ್ಡೆ ಇದೆ ಎನ್ನುತ್ತಿದ್ದ. ಅವನ ಜೀವನ ನೋಡಿ ಭಜಗೋವಿಂದಂನ "ಯೋಗರತೋವ ಭೋಗರತೋವ " ಪದ ಅವನ ಜೀವನಕ್ಕೆ ಬಹಳವೇ ಸೂಕ್ತವೆನಿಸುತ್ತದೆ. ನಾನು ಅವನನ್ನು ನಕ್ಕಿದ್ದೇ ನೋಡಿರಲಿಲ್ಲ. ಬೇರೆಯವರ ಬಗ್ಗೆ ಮಾತೂ ಆಡುತ್ತಿರಲಿಲ್ಲ. ನನ್ನ ತಾತ ಮಾತನಾಡುವಾಗ ಸದಾ ಸಿಟ್ಟಿನಲ್ಲಿರುತ್ತಿದ್ದರು. ಆದರೆ ಡೇನಿ ಮೇಲೆ ಅವರು ರೇಗಿದ್ದು ಯಾವಾಗಲೂ ಇಲ್ಲ. ಒಮ್ಮೆ ನಮ್ಮ ತಾತ ಉತ್ತರದ ಪುಣ್ಯ ಕ್ಷೇತ್ರಗಳಿಗೆ ಪ್ರಯಾಣಮಾಡಿದಾಗ ಸೋನೇಪತ್ ನಿಂದ ಮನೆಗೆಂದು ಒಂದು ತಗಡಿನ ತಂತಿ ಕಿಟಕಿ ಪಾರ್ಶ್ವದ ಬೀರು ತಂದಿದ್ದರು. ನಾಲ್ಕೂ ಕಡೆಗಳಲ್ಲಿ ತಂತಿ ಜಾಲಿ ತಗಡು ಹೊಂದಿದ್ದು ತರಕಾರಿ ಬೀರುವಾಗಿತ್ತು. ಅದರ ಪೆಟ್ಟಿಗೆ ನಮ್ಮ ಮನೆಗೆ ಬಂದಾಗ ಡೇನಿ ಹದಿನೈದು ನಿಮಿಷದಲ್ಲಿ ಸರಿಯಾಗಿ ಜೋಡಿಸಿದ್ದ. ಅದನ್ನು ತರಕಾರಿಯನ್ನು ಇಲಿ ಹಾವಳಿ ಯಿಂದ ರಕ್ಷಿಸಲು ಉಪಯೋಗಿಸುತ್ತಿದೆವು. ನಮಗೆ ಅದನ್ನು ಜೋಡಿಸಲು ಆದರ ತಲೆ ಬುಡ ತಿಳಿಯಲಿಲ್ಲ. ಯಾವಾಗಲೂ ನಮ್ಮ ತಾತ ಅವನನ್ನು ಬುದ್ಧಿವಂತ ಕಸಬುದಾರ ಎಂದೇ ಹೊಗಳುತ್ತಿದ್ದರು. ಆ ಬೀರು ನಮಗೆ ಆಗಿನ ಫ್ರಿಡ್ಜ್ ಅಗಿತ್ತು. ಗೀತೆಯ 12 ನೇ ಅಧ್ಯಾಯದ "ಯಸ್ಮಾನೋ ದ್ವಿಜತೇ ಲೋಕ ಲೋಕಾನೋ ದ್ವಿಜತೇ......... ಬಹಳವೇ ಅವನಿಗೇ ಮಾಡಿದಂತಿದೆ. ಜೇಬಿಲ್ಲದ ಹರಿದ ವೈಸ್ಟ್ ಕೋಟು ಹಾಕಿಕೊಳ್ಳುತ್ತಿದ್ದ ಅವನ ಪ್ಯಾಂಟೂ ಯಾರೋ ಪೋಲೀಸ್ ಕೊಟ್ಟು ಅದಕ್ಕೆತ್ಯಾಪೆ ಹಾಕಿದ್ದು ಸೆಕಂಡ್ ಹ್ಯಾಂಡ್. ಪ್ಯಾಂಟು ಸೊಂಟದಿಂದ ಜಾರದಿರಲೆಂದು ಚೊಳ್ಳೆಹುರಿ ಕಟ್ಟಿಕೊಳ್ಳುತ್ತಿದ್ದ.

ಅವನು ಹೋಟೆಲಿನಲ್ಲಿ ಕುಳಿತು ತಿಂದಿದ್ದು ನೋಡಿರಲಿಲ್ಲ. ಭಟ್ಟರ ಹೋಟೇಲಿನ ಭಟ್ಟರು ಅವನ ಜೊತೆ ಮಾತನಾಡುತ್ತ ಅವರು ಕೊಟ್ಟ ಕಾಫಿ ಮತ್ತು ರವೆಯ ಕೋಡಬಳೆ ಅವರ ಟೇಬಲ್ ಪಕ್ಕ ಮೆಟ್ಟಲ ಕೆಳಗೆ ನಿಂತು ನಿಧಾನವಾಗಿ ಬಾಯಿಗೆ ಹಾಕಿಕೊಳ್ಳುತ್ತಿದ್ದ. ಅವನಿಗೆ ಯಾವ ತರಹದ ಕೆಟ್ಟ ಚಟವೂ ಇರಲಿಲ್ಲ ಯಾವಾಗಲೇ ಅಗಲಿ ನಮ್ಮ ಮನೆ ಕಡೆ ಅವನು ಸುಳಿದರೆ ಅವನ ಹೊಟ್ಟೆಗೆ ಕಾಫಿ ತಿಂಡಿ ದೊರಕುತ್ತಿತ್ತು. ಅವನಿಗೆ ಮಿತ್ರನೆಂದರೆ ನಮ್ಮ ಮನೆ ಹತ್ತಿರವಿದ್ದ ಟೈಲರ್ ಅಮೀರ ಅವರ ಸಾಕು ನಾಯಿ ಟೈಗರ್. ಡೇನಿ ಬರುವ ತನಕ ಟೈಗರ್ ಮಲಗಿರುತ್ತಿತ್ತು ಡೇನಿ ಬಂದಕ್ಷಣ ಟೈಗರ್ ನಿಂತು ಮೈಕೊಡವಿ ಕೊಳ್ಳುತ್ತಿತ್ತು. ಡೇನಿ ಟೈಗರ್ಗೆ ಕೊಡದೆ ತಾನು ತಿನ್ನು ತ್ತಿರಲಿಲ್ಲ.

ನನ್ನ ಅಜ್ಜಿಯವರ ತಂಗಿ ಮತ್ತು ನನ್ನ ತಾಯಿ ಆವನಿಗೆ ಕೋಟ್ರ್ಯಾಕ್, ಟವಲ್ ಸ್ಟ್ಯಾಂಡ್, ಗೋಡೆಗೆ ಹಾಕುವ ರೇಡಿಯೋಸ್ಟ್ಯಾಂಡ್ ತಟ್ಟೆ ಸ್ಟ್ಯಾಂಡ್ ಮಾಡಲು ಹೇಳುತ್ತಿದ್ದರು. ಅವನೇ ಬೇಕಾದ ಹಲಗೆ ಪಟ್ಟಿಗಳು ನಮ್ಮ ಮನೆ

ಹಿಂಬಾಗದಲ್ಲಿ ಶೇಖರಿಸಿ ಇಡುತ್ತಿದ್ದ ಸಾಮಾನು ಉಪಯೋಗಿಸಿ ಬಹಳ ಚೆನ್ನಾಗಿ ತಯಾರಿಸಿ ಹಾಕುತ್ತಿದ್ದನು. ನನ್ನ ಕ್ರಿಕೇಟ್ ಆಟಕ್ಕೆ ಬೇಕಾದ ವಿಕೇಟ್ ಬ್ಯಾಟ್ ಬೇಲ್ಸ್ ಮಾಡಿಕೊಡುತ್ತಿದ್ದ. ನಮ್ಮ ಟೀಮ್ನಲ್ಲಿ ಯಾರು ಸಲಕರಣೆ ಒದಗಿಸುತ್ತಾರೋ ಅವರೇ ಕ್ಯಾಪ್ಟನ್. ಹೀಗಾಗಿ ನಾನೇ ಸದಾ ಕಾಲಕ್ಕೆ ನಂಬರ್ ಒನ್ ನಾನಂತೂ ಅವನಿಗೆ ಎಂದೂ ದುಡ್ಡು ಕೊಡಲಿಲ್ಲ ಅವನು ಕೇಳಲೂ ಇಲ್ಲ (ಇಲ್ಲದ್ದು ಕೊಡುವುದಾದರೂ ಹೇಗೆ) ಸಮಯ ಸಮಯಕ್ಕೆ ಈ ಸಲಕರಣೆಗಳನ್ನು ರಿಪೇರಿ ಮಾಡಿಡುತ್ತಿದ್ದನು. ಚಿನ್ನಿ ದಾಂಡು. ಕ್ಯಾಟರ್ ಪಿಲ್ಲರ್ ಮಾಡಿ ಕೊಡುತ್ತಿದ್ದ. ನಮ್ಮ ಮನೆಯಲ್ಲಿ ನಾವೇನು ತಿನ್ನುತ್ತೇವೋ ಅದೇ ಅವನಿಗೂ ಸಿಗುತ್ತಿತ್ತು. ದಿನವೂ ಸಂಜೆ ಒಂದುಗಂಟೆ ಕಾಲ ತನ್ನ ಸಲಕರಣೆಗಳನ್ನು ಹರಿತ ಮಾಡಿಕೊಂಡು ಮುಂದಿನ ದಿನಕ್ಕಾಗಿ ತಯಾರಾಗುತ್ತಿದ್ದ. ಬೇರೆಯವರ ಕೈಕೆಳಗೆ ಕೆಲಸಮಾಡುತ್ತಿರಲಿಲ್ಲ. ತಾನು ಮಾಡುವ ಕೆಲಸಕ್ಕೆ ಎಂದೂ ಮರ ಖರೀದಿಸಲಿಲ್ಲ. ನಮ್ಮ ಅಂಗಡಿಗೆ ಬರುವ ಜಾಯಿಕಾಯಿ ಪೆಟ್ಟಿಗೆಯ ಹಲಗೆ ಮುಂತಾದವು ಅವನ ಸ್ವತ್ತಾಗುತ್ತಿತ್ತು. ನಮ್ಮ ಮನೆ ನುತ್ತಮುತ್ತಲಲ್ಲಿ ಹೊಸ ಕಟ್ಟಡಗಳಿಗೆ ಡೇನಿ ಯೇಮಿಸ್ತ್ರಿ ಆಗುತ್ತಿದ್ದ. ಅಲ್ಲೆಲ್ಲಾ ಎಷ್ಟು ವಸೂಲಿ ಮಾಡುತ್ತಿದ್ದ ನಮಗೆ ಊಹಿಸಲಾಗದ ವಿಚಾರ ವಾಗಿತ್ತು. ಅದರೆ ಎಲ್ಲೂ ತಕರಾರು ಆಗುತ್ತಿರಲಿಲ್ಲ. ಬೆಂಚು ಟೇಬಲ್ ಚೆನ್ನಾಗಿ ಮಾಡುತ್ತಿದ್ದ. ಪಾಲಿಶ್ ಕೆಲಸದ ಜವಾಬ್ದಾರಿ ತಾನು ತೆಗೆದು ಕೊಳ್ಳುತ್ತಿರಲಿಲ್ಲ. ಬೇರೆಯವರ ಕೈಲಿ ಕೆಲಸಮಾಡಿಸಿ ದುಡ್ಡಿನ ವಿಷಯದಿಂದ ತನ್ನ ವುಸೂಲಿ ವಿರುದ್ದ ಗಲಾಟೆಯಾದೀತೆಂದು ಹೆದರಿಕೆ. ಅವನಂತಹ ಸಜ್ಜನನಿಗೆ ನನ್ನಿಂದ ಒಂದು ಬಾರಿ ಅಕ್ಷಮ್ಯ ನಡೆಯಿತು. ಒಮ್ಮೆ ನನ್ನ ಅಜ್ಜಿ ಹಿರಮಗಳೂರಿಗೆ ದೇವಸ್ಥಾನಕ್ಕೆ ಹೋರಟಾಗ ನನಗೆ ಡೇನಿಗಾಗಿ ಅನ್ನ ಸಾರು ಪಾತ್ರೆಯಲ್ಲಿಟ್ಟಿದ್ದೇನೆ ಅವನಿಗೆ ಊಟದ ಸಮಯ ಬಡಿಸು ಎಂದಿದ್ದರು.

ನಾನು ಎರಡೂವರೆಗೆ ಅವನಿಗೆ ಬಡಿಸಿದೆ ತಟ್ಟೆಗೆ ಆನ್ನ ಹಾಕಿದ್ದೆ ಅವನಿಗೆಂದು ಲೋಟದಲ್ಲಿ ಮಜ್ಜಿಗೆಗೆ ಚೀಟು ಉಪ್ಪು ಕಲಕಿ ಇಟ್ಟಿದ್ದೆ. ಅವನು ಕೈ ತೊಳೆದು ಕೂತು ಸ್ವಲ್ಪ ಮಜ್ಜಿಗೆ ಬಾಯಿಗೆ ಹಾಕಿ ತನ್ನ ಹರ್ಷ ವ್ಯಕ್ತ ಪಡಿಸಿದ. ಅವ್ವಾವ್ರು ಮಜ್ಜಿಗೆಗೆ ಉಪ್ಪು ಕಮ್ಮಿ ಹಾಕ್ತಾರೆ ಆದರೆ ಧನಿಯಾ ಕರಿಬೇವು ಹಾಕ್ತಾರೆ ಎಂದ. ಅವನು ಊಟ ಮಾಡಲು ಕೂತಾಗ ಅನ್ನ ಕ್ಕೆ ಸಾರು ಹಾಕಿ ಸಾಕಾ ಎಂದೆ ಆಗ ತನ್ನ ಹಸ್ತ ತೋರಿಸಿದ ನಾನು ಅಲ್ಲಿಂದ ಹೋಗಬಹುದೆಂದು ಸೂಚನೆಯಾಗಿತ್ತು. ಸರಿ ನಾನು ಜಾಗ ಖಾಲಿ ಮಾಡಿದೆ. ಒಂದು ನಿಮಿಷ ಕಳೆದಿರಲಿಲ್ಲ. ನನ್ನನ್ನು ಕರೆದು ಉಪ್ಪಿನಕಾಯಿ ಬೇಕು ಎಂದು ಕೇಳಿದ. ನಾಲ್ಕು ನಿಂಬೆ ಉಪ್ಪಿನಕಾಯಿ ಹಾಕಿದೆ. ಯಾಕೆ ಸಾರಿಗೆ ಖಾರ ಕಮ್ಮೀನಾ? ಎಂದು ಕೇಳಿದೆ. ಆವನಿಗೆ ಮತ್ತೆ ಅನ್ನ ಬೇಕಾ? ಎಂದೆ. ಇನ್ನೂ ಮತ್ತೆ ಮತ್ತೆ ಕೇಳಿ ಇನ್ನೂ ಸುಮಾರು ಹತ್ತು ಉಪ್ಪಿನ ಕಾಯಿ ಹಾಕಿಸಿಕೊಂಡು ಅನ್ನ ಕಲಸಿಕೊಂಡು ಊಟಮುಗಿಸಿ ಇದು ಅಮ್ಮಾವ್ರು ಮಾಡಿದ ಸಾರಲ್ಲ ಎಂದ ಮಜ್ಜಿಗೆ ಕುಡಿದು ಕೈ ತೊಳೆದುಕೊಂಡು ತನ್ನ ಕೆಲಸದಲ್ಲಿ ಮತ್ತೆ ನಿರತನಾದ. ನಾನು ತತ್ ಕ್ಷಣ ಬಿಸಿ ಕಾಫಿ ತಂದು ಅವನ ಮುಂದಿಟ್ಟೆ ಢೇನಿ ಮುಖ ಅರಳಿತು ಇದು ಅನನಿಗೆ ಬೋನಸ್ ಆಗಿತ್ತು. ಅಜ್ಜಿ ಆರು ಗಂಟೆಗೆ ಬಂದು ತಕ್ಷಣ ನನ್ನನ್ನು ಕರೆದು ಡೇನಿಗೆ ಊಟ ಹಾಕಲಿಲ್ಲವೇ? ಎಂದರು. ಯಾಕೆ ಹಾಗೆ ಕೇಳ್ತೀರಿ ಎಂದೆ. ಆಗ ಅವರು ನಾನು ಅವನಿಗಿಟ್ಟ ಸಾರು ಇಟ್ಟಾಗೇ ಇದೆಯಲ್ಲಾ ಅಂದರು. ನಾನು ಹಾಕಿದ್ದೇನು ಎಂದು ಕೇಳಲು ಅದು ಅಕ್ಕಿ ತೊಳೆದ ಕಲಗಚ್ಚಾಗಿತ್ತು. ಅದನ್ನು ಸಂಜೆಗೆ ಆಕಳಿಗಿಡ ಬೇಕಾಗಿತ್ತು. ಆದರೆ ಸಮಯಕ್ಕೆ ಸರಿಯಾಗೇ ಊಟ ಹಾಕಿದ್ದೆ. ಆದರೆ ಅವನು ಹುಚ್ಚನ ಹಾಗೆ ಮೇಲೆ ಮೇಲೆ ಉಪ್ಪಿನ ಕಾಯಿ ಹಾಕಿಕೊಂಡು ತಿನ್ನುತ್ತಿದ್ದ. ಆ ವಿಕ್ರಮಾದಿತ್ಯನ ತಲೆ ಬೇತಾಳದ ಪ್ರಶ್ನೆಗೆ ಉತ್ತರ ಹೇಳಲಾಗದೆ ಸಾವಿರ ಹೋಳಾಗಿದ್ದ ಅನುಭವ ನನಗಾಯಿತು. ನಮ್ಮ ಅಜ್ಜಿ ತಲೆ ಚಚ್ಚೊಂಡಿರಬಹುದು ಮತ್ತೆ ಇದರ ಬಗ್ಗೆ ಮನೆಯಲ್ಲಿ ಯಾರೂ ಚರ್ಚೆ ಮಾಡಲಿಲ್ಲ ತಿಳಿದೋ ತಿಳಿಯದೇಯೋ ನಾವು ಮಾಡಿದ ಪಾಪದ ಫಲ ನಾವು ಅನುಭವಿಸಲೇ ಬೇಕು. ನನಗೇನು ಸಮಾಧಾನವೆಂದರೆ ಬೇಳೆಕಾಣದ ಸಾರು ಅಥವಾ ಉಪ್ಪುಖಾರ ವಿಲ್ಲದ ಸಾರು ತಿನ್ನ ಬೇಕಾಗಿ ಬಂದಾಗಲೆಲ್ಲಾ ಡೇನಿಗೆ ತಿನ್ನಿಸಿದ ಕಲಗಚ್ಚನ್ನ ನೆನಪಿಸಿಕೊಂಡು ಅದರಿಂದ ಮನಸ್ಸು ಕಸವಿಸಿ ಮಾಡಿಕೊಂಡು ಅದರ ಕಷ್ಟ ಅನುಭವಿಸುತ್ತೇನೆ. ನನ್ನ ಹಿತೈಶಿಗಳೆಲ್ಲಾ ತಿಳೀ ಸಾರಿಗೆ ಡೇನೀ ಸಾರೆಂದೇ ಕರೆಯುತ್ತಾರೆ ಅದು ಅವರಿಗೆ ಜೋಕ್. ನಮ್ಮ ತಂದೆ ಮಾತ್ರ ಈ ವಿಷಯ ಪ್ರಸ್ತಾಪ ಇಷ್ಟಪಡುತ್ತಿರಲಿಲ್ಲ. ಅದರೆ ಮನೆಯಲ್ಲಿ ಈ ಮಾತು ಬಂದಾಗ ಬೇರೆ ವಿಧಿಯಿರಲಿಲ್ಲ. ಈ ಜೀವನದಲ್ಲಿ ಪ್ರತಿ ಜೀವಿ ಇನ್ನೊಬ್ಬರನ್ನು ತಿಳಿಯದೆಯೇ ಕಷ್ಟಕ್ಕೆ ಸಿಕ್ಕಸಿ ಯಾವ ಯಾವ ರೀತಿಯಲ್ಲಿ ಪಾಪವೆಸಗಿ ಅವರಿಗೆ ಅದರ ಫಲ ಏನೋ, ನಾನು ಚಿಕ್ಕಮಗಳೂರಿನಲ್ಲಿದ್ದಾಗ ಇದರ ಬಗ್ಗೆಮಾತನಾಡಿರಲಿಲ್ಲ. ಯಾವಾಗಲೋ ಯಾರಿಗೂ ತಿಳಿಯದೆಯೇ ಅವರವರ ಜೀವನ ಕಳೆಯುತ್ತೆ. ಇದರ ಬಗ್ಗೆಸ್ವಲ್ಪ ಯೋಚಿಸಿ. ಬೊಂಬಾಯಿಗೆಬಂದು ದಿನವೂ ಇದರ ಬಗ್ಗೆಯೇ ಮಾತು ಕರ್ಮ ಫಲದ ಬಗ್ಗೆ ಆ ಪರಮಾತ್ಮನಿಗೂ ತಿಳಿಯದಂತೆ "ಗಹನ ಕರ್ಮಣೋಗತಿ" ಎಂದು ಶ್ರೀಕೃಷ್ಣನೇ ಗೀತೆಯಲ್ಲಿ. ಹೇಳಿರುತ್ತಾನೆ. ನಾನು ಮಾಡಿರುವ ಪಾಪಕ್ಕೆ ಸದಾ ಪಶ್ಚಾತ್ತಾಪವೇ ಮನಸಿಗೆ ಸ್ವಲ್ಪ ಹಿತ ನೀಡುತ್ತದೆ. ನಾನು ಸಜ್ಜನನನ್ನು ಮರೆಯಲು. ಸಾಧ್ಯವೇ ಯೋಚಿಸಿ. ನನ್ನ ಪ್ರಾಯಶ್ಚಿತ್ತದಲ್ಲಿ ತಾವೂ ಭಾಗಿಗಳಾಗಿ. ನಾನು ಎಸಗಿದ ಈ ಅಕ್ಷಮ್ಯ ನನ್ನಿಂದಾಗದಿದ್ದರೆ ಈ ದಿನ ಡೇನಿಯನ್ನು ನೆನಸಿಕೊಳ್ಳಲು ಸಾಧ್ಯವಾಗುತ್ತಿತ್ತೇ?

ಈಗ ಸೋಷಿಯಲ್ ಎಂಜಿನಿಯರಿಂಗ್ ತುರ್ತಿದೆ!

ಕುಂದೂರು ಅಶೋಕ್, ಚಿಕ್ಕಮಗಳೂರು

ಇದು ಯಾವ ಎಂಜಿನಿಯರಿಂಗ್ ಅಂದುಕೊಳ್ಳಬೇಡಿ. ಭವ್ಯ ಭಾರತ ಮುಂದುವರೆಯಲು, ವಿಶ್ವಶಾಂತಿ ಕಾಪಾಡಲು ಸಾಮಾಜಿಕ ಸಾಮರಸ್ಯ ಮೂಡಿಸಲು, ನೆಮ್ಮದಿಯ ಬದುಕು ನಡೆಸಲು ಇದೇ ಇಂದಿನ ಅನಿವಾರ್ಯವಾಗುತ್ತಿರುವ ಸಾಮಾಜಿಕ ಕೀಲಿ ಕೈ.

ಸಮಾಜವೆಂದರೆ, ಸಾಮಾಜಿಕ ಸಂಬಂಧಗಳ ಮೇಲೆ ಹೆಣೆದಿರುವ ಒಂದು ಮಾನವೀಯ ನೆಲೆಯಾಗಿದೆ. ಪ್ರತಿವ್ಯಕ್ತಿ, ಪ್ರತಿ ಕುಟುಂಬ ಕೂಡ ಸಮಾಜದ ಮುನ್ನಡೆಗೆ ಅತ್ಯಗತ್ಯವಾಗಿರುತ್ತದೆ. ಇಲ್ಲಿ ಯಾರೂ ಮುಖ್ಯರಲ್ಲ. ಹಾಗೆಯೇ ಯಾರೂ ಅಮುಖ್ಯರಲ್ಲ ಎಂಬ ಕುವೆಂಪುರವರ ಕವಿವಾಣಿಯನ್ನು ಅರ್ಥಮಾಡಿಕೊಳ್ಳಬೇಕಿದೆ.

ಎಲೆಕ್ಟ್ರಿಕಲ್ಸ್ ಇಂಜಿನಿಯರಿಂಗ್, ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್, ಸಿವಿಲ್ ಇಂಜಿನಿಯರಿಂಗ್, ಎನ್ವಿರಾನ್‌ಮೆಂಟಲ್ ಇಂಜಿನಿಯರಿಂಗ್ ಹೀಗೆ ನೂರಾರು ತಾಂತ್ರಿಕ ಇಂಜಿನಿಯರಿಂಗ್ ಮಾಡಿಕೊಂಡ ನಮ್ಮ ಮಕ್ಕಳು ಮತ್ತು ಯುವಕರು ಮತ್ತೊಬ್ಬರನ್ನು, ಸಮಾಜವನ್ನು ಹಾಗೂ ದೇಶವನ್ನು ಅರ್ಥಮಾಡಿಕೊಂಡು ಸಾಮರಸ್ಯದಿಂದ ಬದುಕುವ ಸೋಷಿಯಲ್ ಇಂಜಿನಿಯರಿಂಗ್ ಕಲಿಯುವುದರಲ್ಲಿ ಹಿಂದೆ ಬಿದ್ದಿರುವುದೇ ನಮ್ಮ ಆರ್ಥಿಕ ಪ್ರಗತಿ ಸಾರ್ಥಕತೆ ಕಂಡುಕೊಂಡಿಲ್ಲ.

ಏಕೆಂದರೆ; ನಮ್ಮಲ್ಲಿ ಬೇಕಾದಷ್ಟು ಆಸ್ತಿ, ಅಂತಸ್ತು, ಸಂಪತ್ತು, ಆಭರಣ, ಬಂಗಲೆ ಇದ್ದರೂ ನಮಗೆ ನಮ್ಮ ಮನೆಗಳಲ್ಲಿ, ಕೆಲಸ ಮಾಡುವ ಕಛೇರಿಗಳಲ್ಲಿ, ಸಾರ್ವಜನಿಕ ಬದುಕಿನಲ್ಲಿ ನೆಮ್ಮದಿ ಮರೀಚಿಕೆಯಾಗುತ್ತಿದೆ ಎಂದರೆ ತಪ್ಪಾಗಲಾರದು. ಸೋಷಿಯಲ್ ಎಂಜಿನಿಯರಿಂಗ್ ಎಂದರೆ; ನಮ್ಮ ವೈಯಕ್ತಿಕ, ಕೌಟುಂಬಿಕ, ಸಾಮಾಜಿಕ ಹಾಗೂ ಸಾರ್ವಜನಿಕ ಸಂಬಂಧಗಳನ್ನು ಮಾನವೀಯ ನೆಲೆಗಳ ಮೇಲೆ ಕಟ್ಟುವ ಒಂದು ಸಾಮಾಜಿಕ ಬಂಧವಾಗಿದೆ. ಇದು ಎಂದೂ ಮುರಿಯದ, ಶಿಥಿಲವಾಗದ, ಮಾಸಿಹೋಗದ ಮಾನವೀಯ ಸಂಬಂಧವನ್ನು ಕಲಿಸುತ್ತದೆ. ನಾವು ಎಲ್ಲಾ ಇಂಜಿನಿಯರಿಂಗ್ ಪದವಿಗಳನ್ನು ಪಡೆದಿದ್ದರೂ ಸೋಷಿಯಲ್ ಎಂಜಿನಿಯರಿಂಗ್‌ನಂತಹ ಮನುಷ್ಯತ್ವದ ಪದವಿಯನ್ನು ಪಡೆಯಲು ಸೋಲುತ್ತಿರುವುದು ಆಧುನಿಕ ಮಾನವ ಸಮಾಜದ ಮಹಾ ವೈಫಲ್ಯವಾಗಿದೆ!

ಸೋಷಿಯಲ್ ಇಂಜಿನಿಯರಿಂಗ್ ಜಾತಿ, ಮತ, ಧರ್ಮ, ಜನಾಂಗ, ಸ್ವಜನಪಕ್ಷಪಾತ, ಅಧಿಕಾರ, ಅಂತಸ್ತು, ನಾನು ಮತ್ತು ನನ್ನದು ಎಂಬ ಅಹಂಕಾರಗಳಿಂದ ದೂರವಿರುತ್ತದೆ. ಮತ್ತೆ ಸೋಷಿಯಲ್ ಇಂಜಿನಿಯರಿಂಗ್‌ನ ಮೂಲದ್ರವ್ಯ ಯಾವುದು? ಅದು ಪ್ರೀತಿ, ತ್ಯಾಗ, ನಿಸ್ವಾರ್ಥ, ಸಹಕಾರ, ಸಾಮರಸ್ಯಗಳಂತಹ ಓಂಕಾರನಾದವನ್ನು ಹೊಮ್ಮಿಸುವ ಜೀವ ದ್ರವ್ಯವಾಗಿರುತ್ತದೆ. ಈಗ ಮಾನವ ಸಮಾಜ ಅಹಂಕಾರದ ಕೊಂಬು-ಕಹಳೆಗಳ ಗದ್ದಲದಿಂದ ಪ್ರೀತಿ, ಕರುಣೆ, ಸಾಮರಸ್ಯ, ಸಹಕಾರ, ಸಹಬಾಳ್ವೆಯಂತಹ ಓಂಕಾರನಾದದ ಕಡೆಗೆ ಹೊರಳಬೇಕಿದೆ.

ಇದನ್ನು ಮನೆಯಿಂದಲೇ ಪ್ರಾರಂಭಿಸಬೇಕಿದೆ. ನಮ್ಮ ಮಕ್ಕಳು ಮನೆ ಮತ್ತು ಶಾಲೆಗಳಲ್ಲಿ ಇದನ್ನು ಕಲಿಯುವುದು ಅನಿವಾರ್ಯವಾಗಿದೆ. ತಮ್ಮ ಕೆಲಸಗಳಾದ ಸ್ನಾನ, ಬಟ್ಟೆ ಧರಿಸುವುದು, ಊಟ ಮಾಡುವುದು, ಮನೆಗೆಲಸ ಮಾಡುವುದು, ಹಿರಿಯರಿಗೆ ಸಹಾಯ ಮಾಡುವುದರಿಂದ; ನಮ್ಮ ಮಕ್ಕಳಲ್ಲಿ ಸ್ವಾವಲಂಬನೆ ತಾನೇ ತಾನಾಗಿ ಬೆಳೆಯುತ್ತದೆ. ಸೋಷಿಯಲ್ ಎಂಜಿನಿಯರಿಂಗ್‌ಗೆ ಸ್ವಾವಲಂಬನೆಯೇ ಮೊದಲ ಮೆಟ್ಟಿಲು. ಅದರ ನಂತರದ್ದು ತನ್ನ ಕುಟುಂಬದ ಸದಸ್ಯರಿಗೆ ಪ್ರೀತಿ, ಗೌರವ ತೋರಿಸುವುದು. ಹಿರಿಯರಿಗೆ ವಿಧೇಯತೆಯಿಂದ ಇರುವುದು, ತಪ್ಪನ್ನು ತಪ್ಪೆಂದು ಒಪ್ಪಿಕೊಳ್ಳುವುದು, ತಪ್ಪನ್ನು ಪ್ರಶ್ನಿಸುವುದು, ತಿಳಿಯದ ವಿಚಾರಗಳನ್ನು ಅರಿಯಲು ಜಿಜ್ಞಾಸೆ ಹೊಂದುವುದು. ತನ್ನ ಕುಟುಂಬ ಅಥವ ಎಲ್ಲಿ ಇರುತ್ತಾನೊ ಅಲ್ಲಿಯ ಸದಸ್ಯರನ್ನು ಗೌರವಿಸುವುದು. ಅವರೊಂದಿಗೆ ಸಹಕರಿಸುತ್ತ ಬದುಕುವಂತಹ ಮೂಲ ಪ್ರವೃತ್ತಿಗಳನ್ನು ಬೆಳೆಸಿದರೆ ಸೋಷಿಯಲ್ ಎಂಜಿನಿಯರಿಂಗ್ ತಾನೇ ತಾನಾಗಿ ಸಂಸ್ಕಾರಗೊಳ್ಳುತ್ತಾ, ಅಂತರ್ಗತಗೊಳ್ಳುತ್ತಾ ಹೋಗುತ್ತದೆ. ಅದನ್ನು ಅವರಿಗೆ ಅಂತರ್ಗತಗೊಳಿಸಬೇಕಾದವರು ತಂದೆ-ತಾಯಿಗಳು, ಶಿಕ್ಷಕರು ಹಾಗೂ ಜನಪ್ರತಿನಿಧಿಗಳ ಹೊಣೆಗಾರಿಕೆ ಹೆಚ್ಚಿರುತ್ತದೆ.

ನಮ್ಮ ಮಕ್ಕಳಿಗೆ ಐ.ಕ್ಯೂ (ಬುದ್ಧಿಶಕ್ತಿ) ಹೆಚ್ಚಾದಂತೆ ಮಕ್ಕಳಲ್ಲಿ ತುರುಸಿನ ಸ್ಪರ್ದೆ ಪ್ರಾರಂಭವಾಗುತ್ತದೆ. ಅದು ಅಂಕಗಳ ಬೆನ್ನೇರಿ ಅರಿವಿಲ್ಲದೆ ನಮ್ಮಿಂದ ಅನಾರೋಗ್ಯಕರವಾದ ವಾತಾವರಣ ಸೃಷ್ಟಿಸುತ್ತದೆ. ಒಬ್ಬನನ್ನು ಹಿಂದಿಕ್ಕಿ ಮತ್ತೊಬ್ಬನನ್ನು ಬದಿಗೊತ್ತಿ ಉಳಿದೆಲ್ಲರನ್ನು ತನ್ನ ಮೂಗಿನ ನೇರಕ್ಕೆ ನಡೆಸಿಕೊಳ್ಳಬೇಕೆಂಬ ಹಠ, ದ್ವೇಷ, ಅಹಂಕಾರ ಹುಟ್ಟುತ್ತದೆ. ಅಹಂಕಾರ ಒಮ್ಮೆ ಹುಟ್ಟಿದ ಮೇಲೆ ಅದನ್ನು ನಿಯಂತ್ರಣದಲ್ಲಿಡಲು ಆಗುವುದಿಲ್ಲ. ಅದು ಸರಣಿ ಪ್ರಕಾರ ಅನಾಹುತ ಮಾಡುತ್ತಲೇ ಇರುತ್ತದೆ.

ಯಾವಾಗ ಸಮಾಜ ಐಕ್ಯೂ ಬೆನ್ನ ಹಿಂದೆ ಬಿದ್ದಿತೋ ಭಾವನಾತ್ಮಕ ಬುದ್ದಿಮತ್ತೆ (ಈ ಕ್ಯೂ) ಎಮೋಷನಲ್ ಕೋಷಂಟ್‌ನಂತಹ ಸಹಕಾರ, ತಾಳ್ಮೆ, ಹೊಂದಾಣಿಕೆ, ಸಾಮರಸ್ಯ, ಕೊಡು-ಕೊಳ್ಳುವಿಕೆ ಹಾಗೂ ಮಾನವೀಯ ಮೌಲ್ಯಗಳು ನೇಪಥ್ಯಕ್ಕೆ ಸರಿದು ಮಾನವ ಸಂಬಂಧಗಳು ಸಡಿಲವಾಗುತ್ತವೆ. ಪ್ರತಿಯೊಂದು ಮನೆ, ಶಾಲೆ, ಹಳ್ಳಿ, ನಗರಗಳು, ದೇಶ ಮತ್ತು ಪ್ರಪಂಚ, ಜಾತಿ-ಧರ್ಮ, ವರ್ಣ, ಬಡವ-ಬಲ್ಲಿದ, ಮೇಲು-ಕೀಳು, ಪ್ರಭಾವವಿರುವವರು ಮತ್ತು ಅಭಾವವಿರುವವರು ಎಂಬ ದ್ವೀಪಗಳು ನಮ್ಮ ನಡುವೆ ಸೃಷ್ಟಿಯಾಗುತ್ತವೆ.

ಪ್ರತಿಯೊಬ್ಬನೂ ತನ್ನ ಎದುರಿಗಿರುವವರನ್ನು ನಿಯಂತ್ರಿಸಲು ಅಥವ ಅವರ ಮೇಲೆ ತಮ್ಮ ಅಧಿಕಾರಸ್ವಾಮಿತ್ವ ಸ್ಥಾಪಿಸಲು ಪ್ರಯತ್ನಿಸುತ್ತಾರೆ. ತನ್ನನ್ನು ತಾನು ನಿಯಂತ್ರಿಸಿಕೊಳ್ಳಲಾರದವರು ಪ್ರಪಂಚವನ್ನು ನಿಯಂತ್ರಿಸಲು ಶುರುಮಾಡಿ; ಇಡೀ ಸಮಾಜವನ್ನು ಪ್ರಪಾತದತ್ತ ನೂಕುತ್ತಾರೆ. ಹಾಗಾಗಿ ಇಂತಹವರ ಸಂಖ್ಯೆ ಮನೆ-ಮನೆಗಳಲ್ಲಿ ವಿದ್ಯಾಸಂಸ್ಥೆಗಳಲ್ಲಿ, ಕೆಲಸ ಮಾಡುವ ಉದ್ಯಮ ಮತ್ತು ಕಛೇರಿಗಳಲ್ಲಿ ಮನುಷ್ಯರ ನಡುವೆ ದೊಡ್ಡಕಂದಕವನ್ನು ಸೃಷ್ಟಿ ಮಾಡಿ ತಮ್ಮ ಬೇಳೆಯನ್ನು ಬೇಯಿಸಿಕೊಳ್ಳುತ್ತಿರುತ್ತಾರೆ.

ಈ ಹೊತ್ತಿಗೂ ನಮ್ಮನ್ನು ಆಳುವ ನಾಯಕರು ಮತ್ತು ಆಡಳಿತ ನಡೆಸುವ ಅಧಿಕಾರಿಗಳು ಸೋಷಿಯಲ್ ಇಂಜಿನಿಯರಿಂಗ್‌ನ್ನು ಒಡೆದು ಆಳುವ ಸಾಧನವನ್ನಾಗಿ ಅಥವಾ ನಕಾರಾತ್ಮಕವಾಗಿ ಬಳಸಿಕೊಳ್ಳುತ್ತಿದ್ದಾರೆ. ಇದನ್ನೇ ಪೊಲಿಟಿಕಲ್ ಕೆಮಿಸ್ಟ್ರಿ ಎಂದು ದೊಡ್ಡಸ್ತಿಕೆಯ ಮಾತುಗಳನ್ನು ಆಡುತ್ತಾರೆ.

ಮಾನವನ ಪ್ರತಿ ಸಾಧನೆ ಅಥವ ಯಶಸ್ಸು ಸಾಕಷ್ಟು ತಾಳ್ಮೆ, ಸಹಿಷ್ಣುತೆ, ಸಹಕಾರ ಮತ್ತು ಸಾಮರಸ್ಯವನ್ನು ಬೇಡುತ್ತವೆ. ಅವುಗಳಿಲ್ಲದೆ ಯಾವ್ ಬುದ್ಧಿವಂತಿಕೆಯು ಭಾವನೆಗಳನ್ನು ಹತ್ತಿಕ್ಕಿ ಕೆಲಸ ಮಾಡಬಾರದು.

ನಾವು ಯಾವುದೇ ಕೆಲಸ ಪಡೆಯಲು, ಯಶಸ್ಸನ್ನು ಸಿದ್ಧಿಸಿಕೊಳ್ಳಲು ಐಕ್ಯೂ (ಅಂಕಾಧಾರಿತ ಬುದ್ಧಿವಂತಿಕೆ) ಮುಖ್ಯವಾಗಿರುತ್ತದೆ. ಆದರೆ ಆ ಯಶಸ್ಸನ್ನು ಉಳಿಸಿಕೊಳ್ಳಲು, ಅರಗಿಸಿಕೊಳ್ಳಲು ಅಥವ ನಮ್ಮ ಯಶಸ್ಸು ಸಮಾಜದ ಯಶಸ್ಸು ಆಗಬೇಕೆಂದರೆ ಹಾಗೂ ದೇಶದ ಪ್ರಗತಿಗೋಸ್ಕರ ಪೂರಕವಾಗಬೇಕೆಂದರೆ, ಅದಕ್ಕೆ ಭಾವನಾತ್ಮಕ ಬುದ್ಧಿಮತ್ತೆ (ಈಕ್ಯೂ) ತೀರಾ ಮುಖ್ಯವಾಗಿರುತ್ತದೆ.

ಭವಿಷ್ಯ ರೂಪಿಸಿಕೊಳ್ಳಲು ಐಕ್ಯೂ ಮುಖ್ಯವಾದರೆ, ಬದುಕನ್ನು ರೂಪಿಸಿಕೊಳ್ಳಲು ಹಾಗೂ ಕುಟುಂಬ ಮತ್ತು ಸಮಾಜವನ್ನು ಮುನ್ನಡೆಸಲು ಈಕ್ಯೂ ಮುಖ್ಯವಾಗುತ್ತದೆ. ಯಾರಿಗೆ ಐಕ್ಯೂ ಜೊತೆಗೆ ಈಕ್ಯೂ ಇರುತ್ತದೆ, ಅವರು ಸಾಮಾಜಿಕ ನಾಯಕತ್ವ ವಹಿಸಿಕೊಳ್ಳಲು ಸಮರ್ಥರಿರುತ್ತಾರೆ. ಅವರನ್ನು ಎಲ್ಲರೂ ಅನುಸರಿಸಲು ಪ್ರಯತ್ನಿಸುತ್ತಾರೆ.

ಸ್ವಾರ್ಥ ಕೇಂದ್ರಿತ ಐಕ್ಯೂ ನಮ್ಮ ಮಕ್ಕಳಲ್ಲಿ ಅಂಕದ ಹಿಂದೆ ಬೀಳುವಂತೆ ಮಾಡಿದೆ. ಅದರ ಹಿಂದೆಯೇ ಜಾತಿ, ಧರ್ಮ, ಲಂಚ, ಭ್ರಷ್ಟಾಚಾರಗಳನ್ನು ಒಂದು ವ್ಯವಸ್ಥೆ ಎಂದು ಸಮರ್ಥವಾಗಿ ಪ್ರತಿಪಾದಿಸುತ್ತಾ ಹೋಗುತ್ತಾರೆ.

ಸರ್ವರಿಗೂ ಸಮಪಾಲು ಮತ್ತು ಸಮಬಾಳು ಎಂಬ ಕಲ್ಪನೆ ಈಕ್ಯೂ ನಂತಹ ಸೋಷಿಯಲ್ ಇಂಜಿನಿಯರಿಂಗ್ ಕಲಿಸಿಕೊಡುತ್ತದೆ. ಸತ್ಯ, ಪ್ರಾಮಾಣಿಕತೆಯನ್ನು ಆದರ್ಶವಾಗಿ ಸ್ವೀಕರಿಸುತ್ತಾರೆ. ಕೊಡು-ಕೊಳ್ಳುವಿಕೆ ಅಥವ 'ಬದುಕು ಬದುಕಲು ಬಿಡು' ಎಂಬ ಸಹಿಷ್ಣತಾ ಮನೋಭಾವನೆಯನ್ನು ಬದುಕಿನ ಧರ್ಮವಾಗಿ ಅಳವಡಿಸಿಕೊಳ್ಳುತ್ತಾರೆ. ತನಗಾದ ನೋವು ಮತ್ತೊಬ್ಬರಿಗೆ ಆಗಬಾರದು, ತನ್ನ ಸಂತೋಷವನ್ನು ಇತರರಿಗೂ ಹಂಚಲು ಪ್ರಯತ್ನಿಸುತ್ತಾರೆ. ಇಂತಹ ಮಾನವೀಯ ಮೌಲ್ಯಗಳನ್ನು ಒಳಗೊಂಡ ಪಠ್ಯಕ್ರಮ ನಮ್ಮ ಶಾಲಾ-ಕಾಲೇಜು ಹಾಗೂ ವಿಶ್ವವಿದ್ಯಾಲಯಗಳಲ್ಲಿ ಅಳವಡಿಸಿಕೊಳ್ಳಬೇಕಿದೆ. ಇದನ್ನೇ 'ಸೋಷಿಯಲ್ ಇಂಜಿನಿಯರಿಂಗ್' ಎನ್ನುವುದು. ಇಂತಹ ಶಿಕ್ಷಣದಿಂದ ರೂಪುಗೊಂಡ ಪ್ರತಿ ಮಗು ಹಾಗೂ ವಿದ್ಯಾರ್ಥಿ ದೇಶದ ಆಸ್ತಿಯಾಗಿ ಸಮಾಜದ ಕೊಡುಗೆಯಾಗಿ ರೂಪುಗೊಳ್ಳುವನು.

ತಾಂತ್ರಿಕ ಇಂಜಿನಿಯರಿಂಗ್‌ನಿಂದ ಬಲಿಷ್ಠವಾದ ಕಟ್ಟಡಗಳನ್ನು ಕಟ್ಟಬಹುದು, ಎರಡು ಸ್ಥಳಗಳಿಗೆ ಸದೃಢ ಸಂಪರ್ಕ ಸೇತುವೆಯನ್ನು ನಿರ್ಮಿಸಬಹುದು, ಪ್ರತಿಯೊಬ್ಬರ ಮನೆ ಬಾಗಿಲಿಗೆ, ಹಳ್ಳಿಗಳಿಗೆ ರಸ್ತೆಗಳನ್ನು ನಿರ್ಮಿಸಿಕೊಡಬಹುದು. ಸಂಪತ್ತನ್ನು ಅಗಾಧವಾಗಿ ಸಂಗ್ರಹಿಸಲೂಬಹುದು!

ಅದೆಲ್ಲವನ್ನು ಉಳಿಸಿಕೊಳ್ಳುವಂತಹ ಸಂಸ್ಕೃತಿಯನ್ನು ಕಲಿಸುವುದು ಸೋಷಿಯಲ್ ಇಂಜಿನಿಯರಿಂಗ್‌ನಿಂದ ಮಾತ್ರ ಸಾಧ್ಯ. ಇದು ಬಲಿಷ್ಠ ಭಾರತವನ್ನು ಕಟ್ಟುತ್ತದೆ. ಮನುಷ್ಯರ ನಡುವೆ ಸಮೃದ್ಧವಾದ ಸಂಬಂಧಗಳಿಗೆ ಸಂಪರ್ಕ ಸೇತುವೆಯನ್ನು ಕಲಿಸುತ್ತದೆ. ಪ್ರತಿಯೊಬ್ಬರ ಬದುಕಿಗೂ ದಾರಿದೀಪವಾಗಿ ತೋರುತ್ತದೆ.

ಸೋಷಿಯಲ್ ಇಂಜಿನಿಯರಿಂಗ್ ಕ್ಷಮೆ ಪಡೆಯುವ, ಕ್ಷಮೆ ನೀಡುವ ಗುಣವನ್ನು ಕಲಿಸುತ್ತದೆ. ಕುಟುಂಬ, ಕಛೇರಿ ಹಾಗೂ ಸಮಾಜದಲ್ಲಿ ಹೊಂದಾಣಿಕೆ ಮನೋಭಾವದಿಂದ ಬದುಕುವ ಸಂಸ್ಕಾರ ನೀಡುತ್ತದೆ. ಸಂಸ್ಕಾರ, ಸಂಸ್ಕೃತಿ, ಸಹಬಾಳ್ವೆಯ ತತ್ವಗಳು ಸೋಷಿಯಲ್ ಇಂಜಿನಿಯರಿಂಗನ್ನು ನಮ್ಮದಾಗಿ ಮಾಡಿಕೊಳ್ಳಲು ಸಹಕರಿಸುತ್ತವೆ. ಪಶುತ್ವದಿಂದ-ಮನುಷ್ಯತ್ವದೆಡೆಗೆ ಮನುಷ್ಯತ್ವದಿಂದ ದೈವತ್ವದೆಡೆಗೆ ಕರೆದೊಯ್ಯುವ ಮಾರ್ಗದರ್ಶಿಯಂತೆ ಕೆಲಸ ಮಾಡುತ್ತದೆ. ಇದು ರಾಜಕಾರಣದಲ್ಲಿ ಗೆಲುವನ್ನು ತಮ್ಮದಾಗಿಸಿಕೊಳ್ಳಲು ಜಾತಿ-ಧರ್ಮಗಳ ಜನಸಂಖ್ಯೆಯನ್ನು ಕೂಡಿ, ಕಳೆದು, ಗುಣಿಸಿ-ಭಾಗಿಸಿ ಲೆಕ್ಕಾಚಾರ ಹಾಕಿ ಲಾಭ ಪಡೆಯುವ ದಂಧೆಯಲ್ಲ; ಸಾಮರಸ್ಯದಿಂದ ಬದುಕಲು ಮಾನವರಿಗೆ ಮಾಂತ್ರಿಕ ಜ್ಞಾನ, ತಿಳುವಳಿಕೆ, ಸಂಸ್ಕಾರ ನೀಡುವ ಒಂದು ಸಾಮಾಜಿಕ ಪ್ರಕ್ರಿಯೆಯಾಗಿದೆ. ಯಾವುದೇ ಖರ್ಚಿಲ್ಲದೆ ನಮ್ಮನ್ನು ನಾವು ತರಬೇತಿಗೊಳಿಸಿಕೊಳ್ಳುವ ಆತ್ಮಾನುಸಂಧಾನವಾಗಿದೆ. ಇದು ಯಾವುದೇ ವಿಶ್ವವಿದ್ಯಾನಿಲಯ ನೀಡುವ ಪದವಿಯಲ್ಲ!!

ಮುರಿಯುತ್ತಿರುವ ಸಂಬಂಧಗಳು, ಶಿಥಿಲಾವಾಗುತ್ತಿರುವ ರಾಷ್ಟ್ರೀಯತೆ, ಬುಗಿಲೇಳುತ್ತಿರುವ ಸಾಮಾಜಿಕ ಹಿಂಸೆಗಳು, ಕುಸಿಯುತ್ತಿರುವ ವೈಯಕ್ತಿಕ ಸಂಬಂಧಗಳಿಗೆ ತೇಪೆ ಹಚ್ಚಿ ಸಾಮಾಜಿಕ ಸೌಧವನ್ನು ಕಟ್ಟಲು ಸೋಷಿಯಲ್ ಇಂಜಿನಿಯರಿಂಗ್ ಇಂದಿನ ತುರ್ತು ಸಂಗತಿಯಾಗಿದೆ.

ಸೈಕಲ್ ಸಂಗಾತಿ
(ಮೊಬೈಲ್ ರಹಿತ ಕಾಲ ಘಟ್ಟ)

✍ ಸುಮನಾ

"....ಇಷ್ಟೇ ನಾ ಮಾರ್ಕ್ಸ್ ತೊಗೊಂಡಿರೋದು,ಒಂದು ಸಬ್ಜೆಕ್ಟ್ ಫೇಲ್ ಬೇರೆ ಆಗಿದೀಯಾ, ನಂಗೆ ಇದು ಭಾರೀ ಅವಮಾನ. ಕೂತ್ಕೊಂಡು ಓದೋಕೆ ಏನು ಧಾಡಿ?? ಅಮ್ಮ ಟೈಮ್, ಟೈಮ್ ಗೆ ತಿಂಡಿ, ಊಟ ಎಲ್ಲಾ ಮಾಡಿ ಕೊಡ್ತಾಳೆ, ಮೂರೂ ಹೊತ್ತೂ ಆ ಕೆಲಸಕ್ಕೆ ಬಾರದ ಸ್ನೇಹಿತರ ಜೊತೆ ಆ ಹಳೇ ಸೈಕಲ್ ಹೊಡೀತಾ ಊರೆಲ್ಲಾ ಸುತ್ತುತ್ತ ಇರ್ತೀಯಾ? ಅದನ್ನೇ ತೊಳೆದು, ಪಾಲಿಶ್ ಮಾಡ್ತಾ ಕೂತಿರ್ತಿಯಾ, ಆ ಸೈಕಲ್ ಖಯಾಲಿಯಿಂದಲೇ ಇಷ್ಟೆಲ್ಲಾ ಆಗಿದ್ದು, ನೀನು ದಡ್ಡ ಶಿಖಾಮಣಿ ಯಾಗಿರೋದು, ಬೆಳಗಾಗುತ್ತಲೇ ಯಾರಿಗಾದ್ರೂ ಆ ಸೈಕಲ್ ನ ದಾನ ಮಾಡಿ ಬಿಡ್ತೀನಿ, ಛಿ .ಛಿ..ನನ್ನ ಕಣ್ಮುಂದೆ ನಿಲ್ಲಬೇಡ..ಹೊರಟ್ಹೋಗು ಅಂತ ಅಪ್ಪ ಕಿರುಚಾಡಿದ್ದು ನೋಡಿ ಪೋರ ಗಂಪಚ್ಚನಿಗೆ ದುಃಖ, ಅವಮಾನ ಎಲ್ಲಾ ಒಟ್ಟಿಗೇ ಆಗಿತ್ತು.

ಅಮ್ಮ ಸಮಾಧಾನ ಮಾಡಿ ಊಟ ಮಾಡಪ್ಪಾ, ಸಂಜೆ ಆಗ್ತಾ ಇದೆ,ಇವತ್ತು ಲೇಟ್ ಆಯ್ತು. ಬರೋ ತಿಂಗಳ ಟೆಸ್ಟ್ ನಲ್ಲಿ ಚೆನ್ನಾಗಿ ಮಾರ್ಕ್ ತೊಗೊಂಡು ಅಪ್ಪನ ಹತ್ತಿರ ಭೇಷ್ ಅನ್ನಿಸ್ಕೋ ಅಂದ್ರು,

"..ಅವನಿಗೆ ಏನೂ ಹೇಳಬೇಡ, ಸುಮ್ಮನಿರು, ಹಸಿವಾದ್ರೆ ತಾನೇ ಬಂದು ಊಟ ಮಾಡ್ತಾನೆ ಅಂದ್ರು ಅಪ್ಪ. ಏನೇ ಆಗಲಿ, ಅಮ್ಮ ಪ್ರೀತಿಯಿಂದ ಕರೆದ್ರೂ ಯಾಕೋ ಮನಸ್ಸಿಗೆ ವಿಪರೀತ ದುಃಖವಾಗಿತ್ತು. ನಂಗೆ ಊಟ ಬೇಡ ಅಂತ ದುಮು, ದುಮು ಅಳುತ್ತಲೇ ಗಂಪಚ್ಚ ಅಂಗಳದಲ್ಲಿದ್ದ ತನ್ನ ಪ್ರೀತಿಯ ಸೈಕಲ್ ನ್ನು ತಬ್ಬಿ ಕೊಂಡು ಗಟ್ಟಿಯಾಗಿ ಅಳುತ್ತಾ..ತನ್ನ ದುಃಖ ವನ್ನು ಅದರ ಮುಂದೆ ತೋಡಿಕೊಂಡ. ಗಂಪಚ್ಚನಿಗೆ ಬೇಜಾರು, ದುಃಖ ವಾದಾಗ ಹೇಳಿ ಕೊಳ್ಳುವ" ಸಂಗಾತಿ "ಆ ಹಳೇ ಮಾಡೆಲ್ ಸೈಕಲ್ ಆಗಿತ್ತು. ತನ್ನ ಸಂಗಾತಿಯನ್ನು ಬೇರೆಯವರ ಬಳಿ ಇರೋದು ಊಹಿಸಲಾಗದೆ ಅದರ ಬಳಿಯೇ ಅಳುತ್ತಾ ಕುಳಿತ ಗಂಪಚ್ಚ.

ಕೋಪದಿಂದ ದೂರ್ವಾಸ ಮುನಿಯಾದ ಅಪ್ಪನನ್ನು ಸಮಾಧಾನ ಮಾಡುವ ಧೈರ್ಯ ಯಾರಿಗೂ ಇರಲಿಲ್ಲ. ಅಪ್ಪನ ಅನುಮತಿ ಇಲ್ಲದೇ ಗಂಪಚ್ಚ ನನ್ನು ಒಳಗೆ ಕರೆಯುವುದೂ ಸಾಧ್ಯಲಿರಲಿಲ್ಲ. ರಾತ್ರಿ ಯಾಗುತ್ತಿದ್ದಂತೆ ಗಂಪಚ್ಚ ತನ್ನ ಪ್ರೀತಿಯ ಸೈಕಲನ್ನೇರಿ ಹೊರಟುಬಿಟ್ಟ, ಗಾಡಿಗೆ ಬ್ರೇಕ್ ಇಲ್ಲ, ಲೈಟ್ ಇಲ್ಲ, ಸೀಟ್, ಪೆಡಲ್ ಎಲ್ಲವೂ ರಿಪೇರಿಗೆ ಬಂದಿತ್ತು.

ಗಂಪಚ್ಚನಿಗೆ ಯಮಧೈರ್ಯ..ಏನಾದರಾಗಲೆಂದು ಹೈವೇ ರಸ್ತೆಯಲ್ಲಿ ಸೈಕಲ್ ತಳ್ಳುತ್ತಾ, ತುಳಿಯುತ್ತಾ ಗೊತ್ತು ಗುರಿಯಿಲ್ಲದ ಸಾಹಸದ ಕಾರ್ಯ ಕೈಗೊಂಡ.

ಸುಮಾರು ದೂರ ಹೋಗಿ ಏನು ಮಾಡೋದು ತಿಳಿಯದೆ ಊರ ಬಳಿಯೊಂದರ ಪಾರ್ಕ್ ನಲ್ಲಿ ಮಲಗಿದ, ಹೊಟ್ಟೆ ಚುರ್ ಅಂದಾಗ..ಕಣ್ಣಿಗೆ ಕಂಡದ್ದು ಸಣ್ಣ ಹೋಟೆಲ್ ,ಅವರ ಬಳಿ ಹಸಿವು ಎಂದ, ಕಾಸಿಲ್ಲವೆಂದಾಗ ಅನುಮಾನಿಸಿದ ಅವರಿಗೆ ಕರುಣೆಯೆನಿಸಿ ಊಟವನ್ನೇನೋ ಕೊಟ್ಟರು, ಜೊತೆಗೆ ತಟ್ಟೆ, ಲೋಟಗಳನ್ನು ತೊಳೆಸಿದರು.

ಬೆಳಗಾಗುತ್ತಲೇ ಯಾರೋ ಒಬ್ಬರು ಬಂದು ಯಾರು ನೀನು? ಇಲ್ಲಿಗೇಕೆ ಬಂದಿದೀಯಾ? ಈ ಸೈಕಲ್ ಇಲ್ಯಾಕಿದೆ ಇತ್ಯಾದಿ ಪ್ರಶ್ನೆ ಗಳನ್ನು ಕೇಳಿ ದರು..ಇವನು ಹೆಸರು ಹೇಳುತ್ತಲೇ ಓ..ನಮ್ಮ ಶಾಮರಾಯರ ಮಗನಲ್ಲವೇ??

ಅಲ್ಲಿ ನೋಡಿದ್ರೆ ನಿಮ್ಮ ಅಪ್ಪ, ಅಮ್ಮ ಕಂಗಾಲಾಗಿದಾರೆ, ನೀನು ಕಾಣೆಯಾಗಿದೀಯಾ ಅಂತ, ಅಮ್ಮ ಕಣ್ಣೀರು ಹಾಕ್ತಿದಾರೆ, ಈಗ ತಾನೇ ಅಪ್ಪ ನಮ್ಮ ಮನೆಗೆ ಬಂದು ವಿಷಯ ತಿಳಿಸಿದ್ರು, ಪೋಲಿಸರ ಹತ್ತಿರ ನಿನ್ನ ಮಿಸ್ಸಿಂಗ್ ಕೇಸ್ ಹಾಕಬೇಕು ಅಂದಿದ್ರು.ನಿಮಗೇನಾದರೂ ಕಣ್ಣಿಗೆ ಬಿದ್ರೆ ಖಂಡಿತಾ ಕರ್ಕೊಂಡು ಬನ್ನಿ, ನಿಮಗೆ ಜೀವಮಾನವಿಡೀ ಋಣಿಯಾಗಿರ್ತೀವಿ ಅಂದರು.

ನಮ್ಮ ಮನೇಲಿ ಇನ್ನೂ ಫೋನ್ ಕನೆಕ್ಷನ್ ಬಂದಿಲ್ಲ ಅಂತ ಅವರೇ ಬಂದು ಹೇಳಿದ್ರು..

..ಏನಪ್ಪಾ ಇದು, ಬಾ ನಾನು ಕರೆದುಕೊಂಡು ಹೋಗುತ್ತೇನೆ ಅಂತ ಕರೆದರು.

"..ಇಲ್ಲ, ಅಂಕಲ್ ಅಪ್ಪ ನಾನು ಟೆಸ್ಟ್ ನಲ್ಲಿ ಫೇಲ್ ಆದೆ ಅಂತ,ಅದಕ್ಕೆಲ್ಲಾ ಈ ಸೈಕಲ್ ಕಾರಣ ಅಂತ ಪಾಪ ಇದ್ರ ಮೇಲೆ ಕೋಪ ತೋರ್ಸಿದಾರೆ.. ನನಗೆ ಈ ಸೈಕಲ್ ಎಂದಿಗೂ ಜೊತೆಯಿದ್ದಂತೆ , ಆ ಭಯಕ್ಕೆ ನಾನು ಮನೆ ಬಿಟ್ಟು ಹೊರಟೆ ಅಂತ ಅಂದ ಗಂಪಚ್ಚ,

ನಾನು ಮನೆಗೆ ಬರೋಲ್ಲ,ಬಂದ್ರೆ ನನ್ನ ಪ್ರೀತಿಯ ಈ ಸೈಕಲ್ ನ ಅಪ್ಪ ಯಾರಿಗಾದ್ರೂ ಕೊಟ್ಟು ಬಿಡ್ತಾರೆ..

ಅಪ್ಪ ನಿಗೆ ನನ್ನ ಮೇಲೆ, ಈ ಸೈಕಲ್ ಮೇಲೆ ವಿಪರೀತ ಕೋಪ ಬಂದಿದೆ, ಇದನ್ನು ಬಿಟ್ಟು ನಾನಿರೋಕೆ ಆಗೋಲ್ಲ ಅಂಕಲ್, ಹೀಗೇ ಏನಾದ್ರೂ ಕೆಲಸ ಮಾಡ್ತೀನಿ ಅಂತ ಅಂದದ್ದು ಕೇಳಿ..

ಇಲ್ಲಪ್ಪಾ, ಅಪ್ಪ ನಿನ್ನ ಒಳ್ಳೆಯದಕ್ಕೆ ಹೇಳಿದ್ದಾರೆ ಅಲ್ವಾ?? ನೀನು ಓದಿ ವಿದ್ಯಾವಂತನಾಗಬೇಕಲ್ವಾ? ಈಗ ಅಪ್ಪನ ಕೋಪ ತಣ್ಣಗಾಗಿದೆ ಬಾ, ನಾನು ಮಾತಾಡಿ ಒಪ್ಪಿಸ್ತೀನಿ ಅಂತ..

ಉಪಾಯ ಮಾಡಿ ಒಪ್ಪಿಸಿದ್ರು..ಹಾಗೂ ಹೀಗೂ ನಸ್ಸಿಲ್ಲದ ಮನಸ್ಸಿನಲ್ಲಿ ಹೊರಟ ಗಂಪಚ್ಚ ನಿಗೆ ಮನೆಗೆ ಬಂದಾಗ ಅಚ್ಚರಿಯೊಂದು ಕಾದಿತ್ತು..

ಹೊಚ್ಚ ಹೊಸ ಸೈಕಲ್ ಒಂದು ಮನೆ ಬಾಗಿಲಿನಲ್ಲಿದ್ದುದು ನೋಡಿ ಗಂಪಚ್ಚ ನಿಗೆ ಪರಮಾಶ್ಚರ್ಯವಾಯಿತು..

ಅಮ್ಮ ಮಗನನ್ನು ನೋಡಿ ಆನಂದಾಶ್ರು ಹರಿಸಿದರು..

ಅಪ್ಪ ಬಳಿಗೆ ಬಂದು , ಯಾಕಪ್ಪಾ ಇಂಥಾ ಕೆಲಸ ಮಾಡಿದೆ? ನಮ್ಮಿಬ್ಬರಿಗೂ ಜೀವದಲ್ಲಿ ಜೀವ ಇರಲಿಲ್ಲ. ನಿನ್ನ ಒಳ್ಳೇದಕ್ಕೇ ಅಲ್ವಾ ನಾನು ಹೇಳೋದು,

ನೋಡು ಆ ಹಳೇ ಸೈಕಲ್ ಸರಿಯಿಲ್ಲ, ಮೂರೂ ಹೊತ್ತು ಏನಾದರೂ ರಿಪೇರಿ ಬರ್ತಾನೇ ಇರುತ್ತೆ. ಅದಕ್ಕೆ ನಿನಗೆ ಹೊಸ ಸೈಕಲ್ ತಂದಿದೀನಿ. ಇನ್ನು ಮುಂದೆ ಚೆನ್ನಾಗಿ ಓದಿ ಒಳ್ಳೆಯ ಮಾರ್ಕ್ಸ್ ತೊಗೋ..

ಅಂದಾಗ..ಗಂಪಚ್ಚ ಅಂದ..ಅಪ್ಪ, ನೀವು ಏನೇ ಹೇಳಿ, ನಾನು ನನ್ನ ಹಳೇ ಸೈಕಲ್ ಯಾರಿಗೂ ಕೊಡೋಲ್ಲ, ನೀವು ಕೊಡೋಕೂ ಬಿಡೋಲ್ಲ.. ನನಗೆ ನನ್ನ ಸೈಕಲ್ ಅಂದ್ರೆ ಪಂಚ ಪ್ರಾಣ..

ಹಳೆಯದರ ಜೊತೆ ಹೊಸದೂ ಇರಲಿ, ನಾನು ಬರುವ ಟೆಸ್ಟ್ ನಲ್ಲಿ ಚೆನ್ನಾಗಿ ಓದುವೆ ಅಂದಾಗ ಎಲ್ಲರಿಗೂ ಒಂದು ರೀತಿ ನಿರಾಳವಾಯಿತು.

ಗಂಪಚ್ಚನ ಇಷ್ಟದಂತೆ ಹಳೆಯ ಮತ್ತು ಹೊಸ ಸೈಕಲ್ ಗಳಿಗೆ ಹೂ ಹಾರ,ಅರಿಶಿನ ಕುಂಕುಮ ಹಚ್ಚಿ, ಆರತಿ ಬೆಳಗಿ ವಾಹನ ಪೂಜೆಯೂ ಗಂಪಚ್ಚನ ಕೈಯಿಂದಲೇ ನಡೆಯಿತು.

ತನ್ನ ಪ್ರೀತಿಯ ಸೈಕಲ್ ಕಾರಣದಿಂದ ತನಗೆ ಹೊಸ ಸೈಕಲ್ ಬಂದದ್ದಕ್ಕೆ. ಸಂಗಾತಿ ಸೈಕಲ್ ಗೆ,ತಾನೆಂದಿಗೂ ಚಿರ ಋಣಿಯಾಗಿರುವೆನೆಂದು ಸಂಗಾತಿ ಸೈಕಲ್ ನೊಂದಿಗೆ ಮಾತನಾಡುತ್ತಾ ಧನ್ಯವಾದಗಳನ್ನರ್ಪಿಸಿದಾಗ

ಸಂಗಾತಿ ಸೈಕಲ್ ನಕ್ಕು ಓ.ಕೆ.ಎಂದು ಸಂತಸ ವ್ಯಕ್ತ ಪಡಿಸಿದೆಂತನಿಸಿತು ಗಂಪಚ್ಚನಿಗೆ.

ಮನೆ ಮುಂದೆ ಅಂದದ ರಂಗೋಲಿ, ಬಾಗಿಲಿಗೆ ಮಾವಿನ ತೋರಣ
"ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ
ಹೊಸ ವರುಷಕೆ ಹೊಸ ಹರುಷವ ಹೊಸತು ಹೊಸತು ತರುತಿದೆ"

✍ ವನಜಾ ರಾಜನ್

ಬಾಳೆ ಎಲೆಯ ಮೇಲೆ ಚಪ್ಪರಿಸಿಕೊಂಡು ಸವಿಯುವ "ನಮ್ಮ ಮನೆ" ಊಟ.....
1) ಬಲಗಡೆ, ಯಿಂದ ಬಡಿಸಬೇಕು → ಪಾಯಸ, ಗಸಗಸೆ
2) ಮೇಲೆ → ಗೆಣಸು, (ಸಿಹಿ) ಅಥವಾ ಆಲೂಗಡ್ಡೆ ಪಲ್ಯ
3) ಅದರ ಪಕ್ಕದಲ್ಲಿ → ಹುರುಳಿಕಾಯಿ ಅಥವಾ ಚಪ್ಪರದವರೆಗೆ ಪಲ್ಯ
4) ಅದರ ಪಕ್ಕದಲ್ಲಿ → ಮಾವಿನ ಕಾಯಿಯಗೊಜ್ಜು
5) ಅದರ ಪಕ್ಕದಲ್ಲಿ → ಹೆಸರು ಬೇಳೆ ಕೊಸಂಬರಿ
6) ಅದರ ಪಕ್ಕದಲ್ಲಿ → ಸವತೆಕಾಯಿ ಮೊಸರು ಪಚ್ಚಡಿ
7) ಅದರ ಪಕ್ಕದಲ್ಲಿ → ಮಾವಿನಕಾಯಿ ಉಪ್ಪಿನಕಾಯಿ
ಕೆಳಗಡೆ ಎಡಭಾಗ
8) ಮಾವಿನಕಾಯಿ ಚಿತ್ರಾನ್ನ, ಕರಿದ ಕಡ್ಲೆಬೀಜ ಸಹಿತ)
9) ಪಕ್ಕದಲ್ಲಿ (ಮೃದು, ಮಧುರ, ಅನ್ನ)
10) ಅದನ್ನು ಕಲೆಸಿಕೊಂಡು ಊಟ ಮಾಡಲು ಬೂದು ಕುಂಬಳ ಕಾಯಿಯ ಹುಳಿ (ಸಾಂಬಾರ್)



12) "ಮುಖ್ಯವಾದ items"
13) ಬೇಳೆ ಒಬ್ಬಟ್ಟು (ಹೋಳಿಗೆ) "ಕಾಯಿ ಒಬ್ಬಟ್ಟು" (Choice)(ಪಕ್ಕದಲ್ಲಿ ಇರಿಸಿರುವ ತಟ್ಟೆಯಲ್ಲಿ ಬಡಿಸಬೇಕು) ಅದರ ಮೇಲೆ ತುಪ್ಪ ಬಡಿಸಬೇಕು ಅಥವಾ ಬೇಕೆನಿಸಿದವರಿಗೆ "ಹಾಲು' ಹಾಕಬಹುದು
14) ಆಂಬೊಡೆ, ಕಡಲೇಬೇಳೆ ಕರಿಬೇವು ಇತ್ಯಾದಿ ಹಾಕಿದ 'ಕರಮು - ಕರಮು ಕರಿದ ಹಪ್ಪಳ
15) ಇಷ್ಟೂ ತಿಂದ ಮೇಲೆ ಒಂದು cup ಗಸೆಗಸೆ ಪಾಯಸ ಕುಡಿದರೆ ಆಹಾ! ಶರೀರಕ್ಕೆ ತೃಪ್ತಿ, ಕಣ್ಣಿಗೆ ಒಳ್ಳೆಯ ನಿದ್ರೆ

I. **RIDDLES:**

1. How many dots appear on a pair of dice?
2. Which is the only body part that is fully grown from birth?
3. What is acrophobia a fear of?
4. In what country was Elon Musk born?
5. What country has the most islands?
6. What planet is closest to the sun?

II **QUIZZES:**

A. I cannot talk but I always reply when spoken , what am I ?
B. PA WALK RK. What is it ?
C. A man who was outside in the rain without an umbrella or a hat didn't get a single hair wet. How is it possible ?
D. What is so fragile that saying its name breaks it ?
E. What can run but never walks. Has a mouth but never talks. Has a head but never weeps. Has a bed but never sleeps. Who am I ?
F. A man calls his dog from the opposite side of the river. The dog crosses the river without getting wet and without using a bridge or boat. How is it possible.

III. **PUZZLE**

I

Which of the four boxed figures at the bottom completes the set above it?



II

Using only straight lines, can you divide this rectangle into eight sections, each of identical shape and size, and each with four red circles?



III

Can you pair these door keys with the impressions? of their ends? Take care though-first impressions may not be what they seem - some could be mirror images!



IV

Get your automobile to the garage, marked with an X, avoiding the potholes as you go



PUZZLES & TEASERS ANSWERS

I. 9 Letters @ 5 = $45, 2. Corn on the cob, 3 SEE O DOUBLE YOU, 4. The letter "e".

II MATH RIDDLES: 1.CHAIR, 2. The Total is 4100.

III. PUZZLES: 86 (87) 88 89 90 91 (Read from the top).

IV. QUIZZES & PUZZLES: 1.Light, 2. They both weigh the same, 3.A cherry, 4.Tooth, 5. Cutlery,6. Teapot.

Compiled by: Mr Ananth Banwasi

Man and early human migration

- NESARU - collation

- Homo sapiens, the first modern humans, evolved from their early hominid predecessors between 200,000 and 300,000 years ago. They developed a capacity for language about 50,000 years ago.
- The first modern humans began moving outside of Africa starting about 70,000-100,000 years ago.
- Humans are the only known species to have successfully populated, adapted to, and significantly altered a wide variety of land regions across the world, resulting in profound historical and
- environmental impacts.

Where do we begin?

Before we tell the stories that make up world history, it is useful to ask: where do we begin? Where did our human stories start?

Homo sapiens is part of a group called hominids, which were the earliest humanlike creatures. Based on archaeological and anthropological evidence, we think that hominids diverged from other primates some where between 2.5 and 4 million years ago in eastern and southern Africa. Though there was a degree of diversity among the hominid family, they all shared the trait of bipedalism, or the ability to walk upright on two legs.

Evolution: Scientists have several theories about why early hominids evolved. One, the aridity hypothesis, suggests that early hominids were more suited to dry climates and evolved as the Africa's dry savannah regions expanded.

According to the savannah hypothesis, early tree-dwelling hominidsmay have been pushed out of their homes as environmental changes caused the forest regions to shrink and the size of the savannah expand. These changes, according to the savannah hypothesis, may have caused them to adapt to living on the ground and walking upright instead of climbing.

Hominids continued to evolve and develop unique characteristics. Their brain capacities increased, and approximately 2.3 million years ago, ahominid known as Homo habilis began to make and use simple tools. By a million years ago, some hominid species, particularly Homo erectus, began to migrate out of Africa and into Eurasia, where they began to make other advances like controlling fire.

(Picture of a Homo habilis skull on a blue background. Skull is missing two of its front teeth.

Homo habilis skull. Image courtesy Wikimedia commons.)

(Picture of a Homo erectus skull on a white background. The cranium is more shallow than that of a Homo sapiens skull.

Homo erectus skull. Image courtesy Wikimedia Commons.)

Though there were once many kinds of hominids, only one remains: Homo sapiens. Extinction is a normal part of evolution, and scientists

continue to theorize why other hominid species didn't survive. We do have some clues as to why some species were less successful at surviving than others, such as an inability to cope with competition for food, changes in climate, and volcanic eruptions.

Migration and the Peopling of the Earth How and why? Between 70,000 and 100,000 years ago, Homo sapiens began migrating from the African continent and populating parts of Europe and Asia. They reached the Australian continent in canoes some time between 35,000 and 65,000 years ago.

Scientists studying land masses and climate know that the Pleisto ceneIce Age created a land bridge that connected Asia and North America (Alaska) over 13,000 years ago. A widely accepted migration theory is that people crossed this land bridge and eventually migrated into Northand South America.

How were our ancestors able to achieve this feat, and why did they make the decision to leave their homes? The development of language around 50,000 years ago allowed people to make plans, solve problems, and organize effectively. We can't be sure of the exact reasons humans first migrated off of the African continent, but it was likely correlated with a depletion of resources (like food) in their regions and competition for those resources. Once humans were able to communicate these concerns and make plans, they could assess together whether the pressures in their current home out weighed the risk of leaving to find a new one.



(Map of the world showing the spread of Homo sapiens throughout the Earth over time. Homo sapiens are reflected with red arrows (shown populating the entire world over time), Homo neanderthalensis is reflected in orange in what is Europe and the Middle East today, and Homo erectus is represented in yellow in Africa, South Asia, and Southeast Asia.

Spread of Homo sapiens. Image courtesy Wikimedia Commons)

Adaptation and effects on nature: When humans migrated from Africa to colder climates, they made clothing out of animal skins and constructed fires to keep themselves warm; often, they burned fires continuously through the winter. Sophisticated weapons, such as spears and bows and arrows, allowed them to kill large mammals efficiently. Along with changing climates, these hunting methods contributed to the extinction of giant land mammals such as mammoths, giant kangaroos, and mastodons. Fewer giant mammals, in turn, limited hunters' available prey. In addition to hunting animals and killing them out of self-defense, humans began to use the earth's resources in new ways when they constructed semi-permanent settlements. Humans started shifting from nomadic lifestyles to fixed homes, using the natural resources there. Semi-permanent settlements would be the building-blocks of established communities and the development of agricultural practices.

Edited by Dr. Jyothi Satish, Printed & Published by Hon. Secretary, The Mysore Association Bombay, Mumbai - 400019. Tel: 2403 7065
Email : mysoreassociation.mumbai@gmail.com Website: www.mysoreassociation.in Printed by Aarati Art Printers, Fort, Mumbai - 1 Mob.: 98201 60077